# ಮೈಸೂರು ಮಹಾನಗರ ಪಾಲಿಕೆ, ಮೈಸೂರು

**MYSURU CITY CORPORATION, MYSURU**

ಸಂಖ್ಯೆ: ಎಂಸಿಸಿ : (ಸಿ)ಪಿಎ : ಕೋವಿಡ್–19 : 08 : 2021–2022 ದಿನಾಂಕ : 03–06–2021

## "ಪತ್ರಿಕಾ ಪ್ರಕಟಣೆ"

**ಕೋವಿಡ್–19 ಸೋಂಕಿನ ಎರಡನೇ ಅಲೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ಮೈಸೂರು ಮಹಾನಗರ ಪಾಲಿಕೆಯಿಂದ ಕೈಗೊಂಡಿರುವ ಕ್ರಮಗಳ ಕುರಿತು ಸಮಗ್ರ ವರದಿ**

ಮೈಸೂರು ಮಹಾನಗರ ವ್ಯಾಪ್ತಿಯಲ್ಲಿ ಕೋವಿಡ್–19 ಸೋಂಕಿನ ಪ್ರಕರಣಗಳು ಹೆಚ್ಚಾಗುತ್ತಿದ್ದ ಹಿನ್ನಲೆಯಲ್ಲಿ ಪಾಲಿಕೆ ವತಿಯಿಂದ ಮುನ್ನೆಚ್ಚರಿಕಾ ಕ್ರಮವಾಗಿ, ಜನಸಾಮಾನ್ಯರಿಗೆ ದಿನನಿತ್ಯ ದೊರಕಬಹುದಾದ ದಿನಸಿ, ಹಾಲು, ಔಷಧಿ, ಹಣ್ಣು–ತರಕಾರಿ ಇತ್ಯಾಧಿ ಸಾಮಗ್ರಿಗಳನ್ನು ಸಾರ್ವಜನಿಕರು ವ್ಯಾಪಾರ ಮಳಿಗೆಗಳ ಮುಂದೆ ಹೆಚ್ಚಿನ ಜನಸಂದಣಿ ಸೇರದಂತೆ, ಕನಿಷ್ಠಪಕ್ಷ ಒಂದು ಮೀಟರ್ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅಂಗಡಿ/ಮಾರಾಟ ಮಳಿಗೆಗಳ ಮುಂಭಾಗ ಅಂತರ ಕಾಯ್ದುಕೊಳ್ಳುವ ಬಾಕ್ಸ್‌ಗಳನ್ನು ಗುರುತಿಸಿ ಸರದಿ ಸಾಲಿನಲ್ಲಿ ನಿಂತು ಜನಸಾಮಾನ್ಯರು ಸಾಮಗ್ರಿಗಳನ್ನು ಖರೀದಿಸುತ್ತಿರುವ ಬಗ್ಗೆ ಪರಿಶೀಲಿಸಿ ಖಚಿತ ಪಡಿಸಿಕೊಳ್ಳುವ ಸಂಬಂಧ ಮೂರು ವಿಧಾನ ಸಭಾ ಕ್ಷೇತ್ರವಾರು ಮೇಲುಸ್ತುವಾರಿ ಕಾರ್ಯವನ್ನು ಕ್ರಮವಾಗಿ ಉಪ ಆಯುಕ್ತರು(ಕಂದಾಯ), ನಗರ ಯೋಜನಾಧಿಕಾರಿ, ಮತ್ತು ಕೌನ್ಸಿಲ್ ಕಾರ್ಯದರ್ಶಿರವರುಗಳಿಗೆ ವಹಿಸಿ ದಿನಾಂಕ : 15–04–2021 ರಂದು ಆದೇಶ ಹೊರಡಿಸಲಾಗಿದ್ದು, ಅದರಂತೆ ಸದರಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದರು.

ಮುಂದುವರೆದು, ಸರ್ಕಾರದ ನಿರ್ದೇಶನದಂತೆ ಏಪ್ರಿಲ್ ಅಂತ್ಯದಿಂದ ಪಾಲಿಕೆ ಅಧೀನಕ್ಕೆ ಒಳಪಟ್ಟಿರುವ ಎಲ್ಲಾ ಮಾರುಕಟ್ಟೆಗಳನ್ನು ಸಂಪೂರ್ಣವಾಗಿ ಮುಚ್ಚಿಸಲು ಕ್ರಮ ವಹಿಸಲಾಗಿದೆ. ಹಾಗೆಯೇ, ಪಾಲಿಕೆಯಿಂದ 10 ವಾಹನಗಳನ್ನು ಹಾಪ್‌ಕಾಮ್ಸ್‌ಗೆ ಒದಗಿಸಿ ಕೊಡಲಾಗಿದ್ದು, ಹಾಪ್‌ಕಾಮ್ಸ್‌ನ ಸಹಯೋಗದೊಂದಿಗೆ ಹಣ್ಣು–ತರಕಾರಿಯನ್ನು ಸಾರ್ವಜನಿಕರಿಗೆ ಪ್ರದೇಶವಾರು ಮಾರಾಟ ಮಾಡುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್–19 ಸೋಂಕಿತ ವ್ಯಕ್ತಿಗಳ ಅನುಕೂಲಕ್ಕಾಗಿ ಪಾಲಿಕೆಯ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಆವರಣದಲ್ಲಿ 24/7 ಸಹಾಯವಾಣಿ ಕೇಂದ್ರ ತೆರೆಯಲಾಗಿದ್ದು, ಈ ಹಿಂದೆ ಸಹಾಯವಾಣಿ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸಿ ಅನುಭವ ಹೊಂದಿರುವ ಶಿಕ್ಷಕರುಗಳನ್ನು ತುರ್ತಾಗಿ ಮರು ನಿಯೋಜಿಸಿಕೊಡುವಂತೆ ಕೋರಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮೈಸೂರು ವಿಭಾಗ, ಮೈಸೂರು ಇವರಿಗೆ ದಿನಾಂಕ : 15–04–2021 ರಂದೇ ಪತ್ರ ಬರೆಯಲಾಗಿದ್ದು, ಅದರಂತೆ ಸದರಿ ಇಲಾಖೆಯಿಂದ ಶಿಕ್ಷಕರುಗಳನ್ನು ಸಹ ನಿಯೋಜಿಸಿ ಕೊಡಲಾಗಿದ್ದು, ಸಹಾಯವಾಣಿ ಕೇಂದ್ರ ಅಂದಿನಿಂದಲೇ ಪ್ರಾರಂಭಿಸಲಾಗಿರುತ್ತದೆ.

ಸದರಿ ಸಹಾಯವಾಣಿ ಕೇಂದ್ರದಲ್ಲಿ ಪ್ರತ್ಯೇಕ ದೂರವಾಣಿ ಸಂಖ್ಯೆಗಳನ್ನು ಅಂದರೆ, ಕೃಷ್ಣರಾಜ ವಿಧಾನಸಭಾಕ್ಷೇತ್ರ : 0821–2517922/2519222, ಚಾಮರಾಜ ವಿಧಾನಸಭಾಕ್ಷೇತ್ರ : 0821–2519922/2519522, ನರಸಿಂಹರಾಜ ವಿಧಾನಸಭಾಕ್ಷೇತ್ರ : 0821–2517422/2515522 ಸಹ ಕಲ್ಪಿಸಲಾಗಿರುತ್ತದೆ. ಸಹಾಯವಾಣಿಗೆ ಒದಗಿಸಿರುವ ದೂರವಾಣಿ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಪತ್ರಿಕಾ ಪ್ರಕಟಣೆಯನ್ನು ಸಹ ಹೊರಡಿಸಲಾಗಿತ್ತು.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್–19 ಸೋಂಕು ಹರಡುವುದನ್ನು ತಡೆಗಟ್ಟುವ ಸಲುವಾಗಿ ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ನಗರ ನಾಗರೀಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸಮನ್ವಯತೆಯಿಂದ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಈ ಕೆಳಕಂಡ ತಂಡಗಳನ್ನು ರಚಿಸಿ ದಿನಾಂಕ : 14–04–2021 ರಂದೇ ಅಧಿಕೃತ ಜ್ಞಾಪನ ಹೊರಡಿಸಲಾಗಿರುತ್ತದೆ.

..2

| ಕ್ರ ಸಂ | ರಚಿಸಿರುವ ತಂಡ |
|---|---|
| 1 | ತಪಾಸಣಾ ತಂಡ (TESTING TEAM)ಹಾಗೂ ಇವರಿಗೆ ನೆರವಾಗಲು ಮೊಬೈಲ್ ತಂಡ ಮತ್ತು ಸ್ಟ್ಯಾಟಿಕ್ ತಂಡ |
| 2 | Quarantine Watch App ಮತ್ತು Home Isolation ನಿರ್ವಹಣಾ ತಂಡ |
| 3 | ಕೋವಿಡ್–19 ಲಸಿಕಾ ತಂಡ (Vaccination Team) |
| 4 | ನಗರ ವ್ಯಾಪ್ತಿಯಲ್ಲಿ ಕೋವಿಡ್–19 ಪಾಸಿಟಿವ್ ಸೋಂಕಿತ ವ್ಯಕ್ತಿಗಳ ಮನೆಗಳು /ಮುಖ್ಯ ರಸ್ತೆಗಳು/ ಉದ್ಯಾನವನಗಳು/ ಮಾರುಕಟ್ಟೆಗಳು/ ಮೈಕ್ರೋ ಕಂಟೈನ್‌ಮೆಂಟ್ ಜೋನ್ ಹಾಗೂ ಇನ್ನಿತರೇ ಸಾರ್ವಜನಿಕ ಸ್ಥಳಗಳಲ್ಲಿ ಸ್ಯಾನಿಟೈಸೇಷನ್ ಮಾಡಿಸಲು ರಚಿಸಿರುವ ತಂಡ ಮತ್ತು ಕೋವಿಡ್–19 ಸಹಾಯವಾಣಿ ತಂಡ. |

ಮೈಸೂರು ನಗರ ವ್ಯಾಪ್ತಿಯಲ್ಲಿ Home Isolation & Quarantine Watch App ಕಾರ್ಯ ನಿರ್ವಹಿಸುವ ಸಲುವಾಗಿ 65 ವಾರ್ಡ್‌ಗಳಿಗೆ 130 ಬೂತ್ ಮಟ್ಟದ ಅಧಿಕಾರಿ/ಶಿಕ್ಷಕರುಗಳನ್ನು ನಿಯೋಜಿಸಲಾಗಿದೆ. ಅವರುಗಳ ಕಾರ್ಯನಿರ್ವಹಣೆಯ ಮೇಲುಸ್ತುವಾರಿಗಾಗಿ ಆಯಾಯ ವಾರ್ಡ್ ವ್ಯಾಪ್ತಿಯ ಕಂದಾಯ ಪರಿಶೀಲಕರುಗಳನ್ನು ನಿಯೋಜಿಸಲಾಗಿದೆ. ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ 65 ವಾರ್ಡ್‌ಗಳಲ್ಲಿ ಕೋವಿಡ್ ಸೋಂಕಿತ ವ್ಯಕ್ತಿಗಳು ಮನೆಯ ಪ್ರತ್ಯೇಕತೆಯಲ್ಲಿ (Home Isolation) ಚಿಕಿತ್ಸೆ ಪಡೆಯುತ್ತಿದ್ದಾರೆ. ಮತ್ತು Quarantine Watch App ನಲ್ಲಿ ದಾಖಲಿಸಲಾಗಿದೆ. **( ದಿನಾಂಕ : 02–06–2021 ರ ಅಂತ್ಯಕ್ಕೆ ವಿವರ ಈ ಕೆಳಕಂಡಂತಿದೆ.).**

**HOME ISOLATION AS ON 02-06-2021**

| Total No. ofPerson in HI | No. of Persons Visited | | | | | %age Visited | Tested Person | | Breaches Done | |
|---|---|---|---|---|---|---|---|---|---|---|
| | NIL | 1-Times | 2-Times | >2-Times | Total | | No. | %age | No. | %age |
| 6293 | 658 | 2359 | 1568 | 1708 | 5635 | 89.54 | 149 | 2.37 | 10 | 0.16 |

**HOME QUARANTINE AS ON 02-06-2021**

| No. of Person in Active Quarantine | No. of HQ Person Visited by Staff | | % age of HQ Visited by Staff | | No. of Selfies sent byCitizen | | %age of Selfies sentby Citizen |
|---|---|---|---|---|---|---|---|
| | Cumulative | 24 Hour | Cumulative | 24 Hour | Cumulative | 24 Hour | |
| 6293 | 5635 | 3267 | 89.54% | 51.91% | 0 | 0 | 0.00% |

ಸದರಿ ತಂಡಗಳಿಗೆ ನಿಯೋಜಿಸಲಾಗಿರುವ ಎಲ್ಲಾ ಅಧಿಕಾರಿ/ಸಿಬ್ಬಂಧಿಗಳು ತಮ್ಮ ಮೊಬೈಲ್ ಮತ್ತು ವಾಕಿ–ಟಾಕಿ ಗಳನ್ನು ಸದಾ ಕಾಲ 24 x 7 ಚಾಲನೆಯಲ್ಲಿ ಇರುವಂತೆ ಕ್ರಮವಹಿಸುವುದು. ಮೇಲಾಧಿಕಾರಿಗಳೊಂದಿಗೆ ಹಾಗೂ ಪರಸ್ಪರ ಸಮನ್ವಯತೆ ಸಾಧಿಸಿ ತಮಗೆ ವಹಿಸಿರುವ ಕರ್ತವ್ಯಗಳಲ್ಲಿ ಯಾವುದೇ ಲೋಪಗಳಿಗೆ ಆಸ್ಪದ ನೀಡದಂತೆ ಎಚ್ಚರಿಕೆಯಿಂದ ಮತ್ತು ಸರ್ಕಾರದಿಂದ ಹೊರಡಿಸಿರುವಂತಹ ಮಾರ್ಗಸೂಚಿಗಳನ್ನು ಅನುಸರಿಸಿಕೊಂಡು ಕರ್ತವ್ಯ ನಿರ್ವಹಿಸಲು ಸಹ ಸೂಚಿಸಲಾಗಿರುತ್ತದೆ.

Home Isolation & Quarantine Watch App ನ ಜವಾಬ್ದಾರಿಯನ್ನು ನೋಡಿಕೊಳ್ಳುವುದಕ್ಕಾಗಿ ಶ್ರೀ.ಎನ್.ಎಂ.ಶಶಿಕುಮಾರ್, ಹೆಚ್ಚುವರಿ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.

ಕೋವಿಡ್–19 ತುರ್ತು ಪರಿಸ್ಥಿತಿ ನಿಭಾಯಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರು ಮಹಾನಗರ ಪಾಲಿಕೆಯ ಪೌರಾಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಕೈಗೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಅಗತ್ಯ ಕ್ರಮವಹಿಸಲು ಸಂಬಂಧಪಟ್ಟ ಪರಿಸರ ಅಭಿಯಂತರರು, ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರುಗಳಿಗೆ ಸೂಚಿಸಿ, ದಿನಾಂಕ : 21–04–2021 ರಂದೇ ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿರುತ್ತದೆ.

..3

ಕೋವಿಡ್–19 ಸೋಂಕು ಸ್ಫೋಟ ಮತ್ತು ಹರಡುವುದನ್ನು ತಡೆಗಟ್ಟುವ ಹಾಗೂ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಸಂಬಂಧ ಕೋವಿಡ್ ಕಾರ್ಯಕ್ಕಾಗಿ ನಿಯೋಜಿಸಿರುವ ಮೈಸೂರು ಮಹಾನಗರ ಪಾಲಿಕೆಯ ಅಧಿಕಾರಿ/ಸಿಬ್ಬಂಧಿಗಳು ರಜೆಯನ್ನು ಪಡೆಯತಕ್ಕದ್ದಲ್ಲ. ರಜೆ ಪಡೆಯುವುದು ಅನಿವಾರ್ಯವಾದಲ್ಲಿ ಜಿಲ್ಲಾಧಿಕಾರಿಗಳ ಪೂರ್ವಾನುಮತಿಯನ್ನು ಪಡೆಯತಕ್ಕದ್ದು ಎಂಬುದಾಗಿ ಈ ಕಚೇರಿಯಿಂದ ದಿನಾಂಕ : 21–04–2021 ರಂದೇ ಸುತ್ತೋಲೆ ಹೊರಡಿಸಲಾಗಿರುತ್ತದೆ.

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೋವಿಡ್–19 ರ ಸೋಂಕು ತೀವ್ರಗತಿಯಲ್ಲಿ ಹರಡುತ್ತಿದ್ದ ಕಾರಣ ಮುಂಜಾಗ್ರತಾ ಕ್ರಮವಾಗಿ ಅಧಿಕ ಜನಸಂದಣಿ ಸೇರುವ ಪಾಲಿಕೆಗೆ ಸೇರಿದ ದೇವರಾಜ ಮಾರುಕಟ್ಟೆ, ಮಂಡಿ ಮಾರುಕಟ್ಟೆ ಮತ್ತು ವಾಣಿ ವಿಲಾಸ ಮಾರುಕಟ್ಟೆಗಳಲ್ಲಿರುವ ಅಗತ್ಯ ವಸ್ತುಗಳ ಅಂಗಡಿ/ಮಳಿಗೆಗಳ ಪೈಕಿ ದಿನಾಂಕ : 23–04–2021 ರಿಂದ ಸಮ ಮತ್ತು ಬೇಸ ಸಂಖ್ಯೆ ಆಧಾರದ ಮೇಲೆ ವಾರದ ದಿನಗಳಲ್ಲಿ ಬೆಳಗ್ಗೆ 6:00 ರಿಂದ ಸಂಜೆ 5:00 ಗಂಟೆಯವರೆಗೆ ಮಾತ್ರ ವ್ಯಾಪಾರ ಮಾಡಲು ಹಾಗೂ ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿರುತ್ತದೆ ಎಂಬ ಆದೇಶವನ್ನು 22–04–2021 ರಂದೇ ಹೊರಡಿಸಲಾಗಿದ್ದು, ಅದರಂತೆ ಪಾಲಿಕೆ ಅಧಿಕಾರಿ/ಸಿಬ್ಬಂದಿಗಳು ಕಾರ್ಯಪ್ರವೃತ್ತರಾಗಿರುತ್ತಾರೆ.

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಕೋವಿಡ್–19 ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ವೈಯುಕ್ತಿಕ ಮತ್ತು ಸಮುದಾಯದ ತುರ್ತು ಪರಿಸ್ಥಿತಿಯನ್ನು ಎದುರಿಸಲು ಜಿಲ್ಲಾ ವ್ಯಾಪ್ತಿಯಲ್ಲಿ ಕರೋನಾ ವೈರಾಣು ಹರಡದಂತೆ ಶಂಕಿತ ಸೋಂಕಿತರನ್ನು ಸದರಿಯವರ ಮನೆಯಲ್ಲೇ ಪ್ರತ್ಯೇಕತೆಯಲ್ಲಿ ಇರಿಸಿ (Home Isolation) ಅವರ ಮೇಲೆ ನಿಗಾ ವಹಿಸುವ ಸಂಬಂಧ ಜಿಲ್ಲಾಡಳಿತದಿಂದ ನೋಡಲ್ ಅಧಿಕಾರಿಯಾಗಿ ನಿಯೋಜನೆಗೊಂಡಿರುವ ಅಧಿಕಾರಿಯೊಂದಿಗೆ ಸಮನ್ವಯತೆ ಸಾಧಿಸಿ ನೋಡಲ್ ಅಧಿಕಾರಿಯವರು ನೀಡುವ ಸೂಚನೆ ಮತ್ತು ಮಾರ್ಗದರ್ಶನದಂತೆ ಕಾರ್ಯನಿರ್ವಹಿಸಲು ಪಾಲಿಕೆಯ ಕಂದಾಯಾಧಿಕಾರಿ/ಸಹಾಯಕ ಕಂದಾಯಾಧಿಕಾರಿಗಳನ್ನು ನಿಯೋಜಿಸಿ ದಿನಾಂಕ : 22–04–2021 ರಂದೇ ಹೊರಡಿಸಲಾಗಿದ್ದು, ಅದರಂತೆ ಪಾಲಿಕೆ ಅಧಿಕಾರಿ/ಸಿಬ್ಬಂದಿಗಳು ಕಾರ್ಯಪ್ರವೃತ್ತರಾಗಿರುತ್ತಾರೆ.

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೋವಿಡ್–19 (ಕೊರೊನಾ ವೈರಸ್) ಸೋಂಕಿನಿಂದ ಮೃತಪಟ್ಟ ವ್ಯಕ್ತಿಗಳ ಅಂತ್ಯ ಸಂಸ್ಕಾರಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಸ್ಮಶಾನಗಳನ್ನು ಗುರುತಿಸಲಾಗಿದೆ.

- ಮೈಸೂರು ವಿಜಯನಗರ ನಾಲ್ಕನೇ ಹಂತ ಎರಡನೇ ಘಟಕದಲ್ಲಿರುವ ಮುಕ್ತಿಧಾಮ (ವಿದ್ಯುತ್ ಚಿತಾಗಾರ)
- ಮೈಸೂರು ನಗರದ ಜಯನಗರದಲ್ಲಿರುವ ಅನಿಲ ಚಿತಾಗಾರ (ಕಾವೇರಿ ಸ್ಕೂಲ್ ಹಿಂಭಾಗ)
- ನಂಜನಗೂಡು–ಊಟಿ ರಸ್ತೆಯಲ್ಲಿರುವ ಖಬರಸ್ತಾನ್ (ಸ್ಮಶಾನ)
- ಜೋಡಿ ತೆಂಗಿನ ಮರದ ಸ್ಮಶಾನ (ಕಟ್ಟಿಗೆಯಿಂದ ಸುಡುವ ಸ್ಮಶಾನ)
- ರಮ್ಮನಹಳ್ಳಿಯ ಎರಡನೇ ಈದಿಗದಲ್ಲಿರುವ ಖಬರಸ್ತಾನ್ (ಸ್ಮಶಾನ)

ಸದರಿ ಸ್ಮಶಾನಗಳಲ್ಲಿ ಅಗತ್ಯ ಕ್ರಮಕೈಗೊಳ್ಳಲು ನೋಡಲ್ ಅಧಿಕಾರಿಯಾಗಿ ಶ್ರೀ ಎ.ಎನ್ ಮಧುಸೂಧನ್, ಕಾರ್ಯಪಾಲಕ ಅಭಿಯಂತರರು(ಪಶ್ಚಿಮ) ಮತ್ತು ಅನುಷ್ಠಾನ ಅಧಿಕಾರಿಯಾಗಿ ಶ್ರೀ.ಅನಿಲ್ ಕ್ರಿಷ್ಟಿ, ಸಹಾಯಕ ಸಾಂಖ್ಯಿಕ ಅಧಿಕಾರಿ ಇವರುಗಳನ್ನು ನಿಯೋಜಿಸಿ ದಿನಾಂಕ : 30–04–2021 ರಂದೇ ಅಧಿಕೃತ ಜ್ಞಾಪನ ಹೊರಡಿಲಾಗಿದೆ.

..4

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾರ್ಡ್ ಮಟ್ಟದ ಕಾರ್ಯಾಚರಣೆ ಪಡೆಯನ್ನು (WLTF) 65 ವಾರ್ಡ್‌ಗಳಲ್ಲಿ ಈ ಕೆಳಕಂಡಂತೆ ರಚಿಸಿ ದಿನಾಂಕ : 05–05–2021 ರಂದೇ ಅಧಿಕೃತ ಜ್ಞಾಪನ ಹೊರಡಿಸಲಾಗಿದೆ.

| ಕ್ರ ಸಂ. | ವಾರ್ಡ್ ಮಟ್ಟದ ಸಮಿತಿ ಸದಸ್ಯರ ವಿವರ | ಹುದ್ದೆ |
|---|---|---|
| 1. | ಮಹಾನಗರ ಪಾಲಿಕೆಯ ವಾರ್ಡ್‌ನ ಸದಸ್ಯರು | ಅಧ್ಯಕ್ಷರು |
| 2. | ವಾರ್ಡ್ ವ್ಯಾಪ್ತಿಗೆ ಒಳಪಡುವ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಅಥವಾ ಖಾಸಗಿ ವೈದ್ಯರು | ಸದಸ್ಯರು |
| 3. | ವಾರ್ಡ್‌ಗೆ ಸಂಬಂಧಿಸಿದ ಸಹಾಯಕ / ಕಿರಿಯ ಅಭಿಯಂತರರು ಮತ್ತು ಕಂದಾಯ ಪರಿಶೀಲಕರು | ಸದಸ್ಯರು |
| 4. | ವಾರ್ಡ್ ವ್ಯಾಪ್ತಿಗೆ ಒಳಪಡುವ ಪೊಲೀಸ್ ಠಾಣೆಯ ಒಬ್ಬರು ಪೊಲೀಸ್ ಸಿಬ್ಬಂದಿ | ಸದಸ್ಯರು |
| 5. | ವಾರ್ಡ್ ವ್ಯಾಪ್ತಿಗೆ ಸಂಬಂಧಿಸಿದ ಆಶಾ ಕಾರ್ಯಕರ್ತೆಯರು | ಸದಸ್ಯರು |
| 6. | ವಾರ್ಡ್ ವ್ಯಾಪ್ತಿಗೆ ಒಳಪಡುವ ಸರ್ಕಾರೇತರ ಸಂಸ್ಥೆಯಿಂದ (NGO) ಒಬ್ಬರು ಪ್ರತಿನಿಧಿ | ಸದಸ್ಯರು |
| 7. | ವಾರ್ಡ್ ವ್ಯಾಪ್ತಿಗೆ ಸಂಬಂಧಿಸಿದ ಆರೋಗ್ಯ ಪರಿವೀಕ್ಷಕರು | ಸದಸ್ಯ ಕಾರ್ಯದರ್ಶಿ |

ಸದರಿ ಕಾರ್ಯಾಚರಣೆ ಪಡೆಯ ಮುಖಾಂತರ ಕೋವಿಡ್–19 ಎರಡನೇ ಅಲೆಯ ಹರಡುವಿಕೆಯನ್ನು ತಡೆಗಟ್ಟಲು ಮಾರ್ಗಸೂಚಿಗಳನ್ನು ಸಹ ಹೊರಡಿಸಲಾಗಿದ್ದು, ಸಮಿತಿಗೆ ಈ ಕೆಳಕಂಡ ಜವಬ್ದಾರಿಗಳನ್ನು ನಿಗಧಿಪಡಿಸಿದೆ.




ವಾರ್ಡ್ ಮಟ್ಟದ ಕಾರ್ಯಾಚರಣೆ ಪಡೆಯು (WLTF) ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ದಿನಾಂಕ : 15–05–2021 ರಂದು Dr. Nagaraja.N.T., WHO Member & Ward Level COVID Management Committe, GoK & Sri. Srinivas Alavilli, Janaagraha- Member & Ward Level COVID Management Committe, BBMP & Smt.Sapna Karin, Janaagraha- Member & Ward Level COVID Management Committe, BBMP ರವರಿಂದ Orientation ತರಬೇತಿಯನ್ನು ಸಹ ನೀಡಲಾಗಿದೆ.

ಮಾನ್ಯ ಮಹಾಪೌರರು, ಉಪ ಮಹಾಪೌರರು, ಆಯುಕ್ತರು ಮತ್ತು ಡಾ: ಸುಧೀರ್ ನಾಯಕ್ ರವರುಗಳ ಉಪಸ್ಥಿತಿಯಲ್ಲಿ ದಿನಾಂಕ : 18–05–2021 ರಂದು ವೀಡಿಯೋ ಸಂವಾದದ ಮುಖೇನ ವಾರ್ಡ್ ಮಟ್ಟದ ಕಾರ್ಯಾಚರಣೆ ಪಡೆಯು (WLTF) ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ಅಧ್ಯಕ್ಷರು ಮತ್ತು ಸದಸ್ಯರುಗಳೊಂದಿಗೆ ಸಂವಾದ ನಡೆಸಲಾಯಿತು.

ಮೈಸೂರು ಮಹಾನಗರ ಪಾಲಿಕೆಯ 2021–22 ನೇ ಸಾಲಿನ ಆಯವ್ಯಯವು ದಿನಾಂಕ: 29–04–2021 ರಂದು ಮಂಡನೆಯಾಗಿದ್ದು, ಕೋವಿಡ್–19 (ಕೊರೊನಾ ವೈರಸ್) ಎರಡನೇ ಅಲೆ ಸೋಂಕು ನಿವಾರಣೆಗಾಗಿ ಪ್ರತಿ ವಾರ್ಡ್‌ಗೆ ರೂ.5.00 (ಐದು ಲಕ್ಷ ರೂಪಾಯಿಗಳು ಮಾತ್ರ) ಲಕ್ಷಗಳನ್ನು ಮಂಜೂರು ಮಾಡಲಾಗಿರುತ್ತದೆ. ದಿನಾಂಕ : 05–05–2021 ರಂದು ಮಾನ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಜರುಗಿದ ಕಲಾಪ ಸಲಾಹ ಸಮಿತಿ ಸಭೆಯಲ್ಲಿ ಮೊದಲ ಹಂತದಲ್ಲಿ ರೂ : 1.00 ಲಕ್ಷಗಳನ್ನು ( ಒಂದು ಲಕ್ಷ) ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು. ಸದರಿ ಮೊತ್ತವನ್ನು ವಾರ್ಡ್ ಮಟ್ಟದಲ್ಲಿ ಬರುವ ಸಂಬಂಧಪಟ್ಟ ವಲಯ ಕಚೇರಿಯ ವಲಯ ಆಯುಕ್ತರ ಹೆಸರಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತವನ್ನು ನಿಯಮಗಳನ್ನು ಪಾಲಿಸಿ ಸೋಂಕು ನಿವಾರಣೆಗಾಗಿ ಅಗತ್ಯವಿರುವ ಔಷಧ ವೆಚ್ಚಗಳಿಗಾಗಿ ಸದ್ಬಳಕೆ ಮಾಡಲು ಸಮಿತಿಯ ತೀರ್ಮಾನದಂತೆ ವೆಚ್ಚ ಮಾಡಿ, ಹಣ ಬಳಕೆ ಪ್ರಮಾಣ ಪತ್ರವನ್ನು ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದುಕೊಂಡು, ಮರುಹೊಂದಾಣಿಕೆ ಲೆಕ್ಕವನ್ನು ಲೆಕ್ಕಶಾಖೆಗೆ ಸಲ್ಲಿಸುವ ಜವಾಬ್ದಾರಿಯನ್ನು ವಲಯ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿಯವರಿಗೆ ಗೊತ್ತುಪಡಿಸಿದೆ. ಹಾಗೂ ಹೆಚ್ಚುವರಿ ಅನುದಾನಕ್ಕಾಗಿ ವಲಯ ಆಯುಕ್ತರು ಕೋರಿಕೆಯನ್ನು ಸಲ್ಲಿಸಿದ ತಕ್ಷಣವೇ ಹಣ ಬಿಡುಗಡೆಗೆ ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಚನೆಯನ್ನು ಸಹ ನೀಡಲಾಗಿದೆ.

ಸದರಿ ವಾರ್ಡ್ ಮಟ್ಟದ ಕಾರ್ಯಾಚರಣೆ ಪಡೆಯ (WLTF) ವ್ಯಾಪ್ತಿಗೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಯವರು ಸದಸ್ಯ ಕಾರ್ಯದರ್ಶಿಯಾಗಿದ್ದು, ಈಗಾಗಲೇ 02 ಅಥವಾ 02 ಕ್ಕಿಂತ ಹೆಚ್ಚಿನ ಸಂಖ್ಯೆಯ ಸಭೆಗಳನ್ನು ನಡೆಸಿ, ಸೋಂಕು ನಿಯಂತ್ರಣಾ ಕಾರ್ಯದಲ್ಲಿ ವಾರ್ಡ್ ಮಟ್ಟದ ಕಾರ್ಯಾಚರಣೆ ಪಡೆಯು ಸ್ವಯಂ ಸೇವಕರು ಮತ್ತು ಆಶಾ ಕಾರ್ಯಕರ್ತೆಯರೊಂದಿಗೆ ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಂಬಂಧಪಟ್ಟ ವಲಯ ಕಚೇರಿಯ ಅಧಿಕಾರಿ/ಸಿಬ್ಬಂದಿಯು ಮಾನಿಟರಿಂಗ್ ಕಾರ್ಯ ನಿರ್ವಹಿಸುತ್ತಿದ್ದಾರೆ. ವಾರ್ಡ್ ಮಟ್ಟದ ಕಾರ್ಯಾಚರಣೆ ಪಡೆಯು ಕೈಗೊಳ್ಳುವ ಕ್ರಮಗಳ ಬಗ್ಗೆ ಪ್ರತಿ ದಿನ ಮಾಹಿತಿಯನ್ನು ಸಂಗ್ರಹಿಸಿ, ಕ್ರೋಢಿಕೃತ ಮಾಹಿತಿಯನ್ನು ಆಯುಕ್ತರಿಗೆ ಸಲ್ಲಿಸಲು ನೋಡಲ್ ಅಧಿಕಾರಿಯನ್ನಾಗಿ ಕು: ಚಿನ್ಮಯಿ, ಪರಿಸರ ಅಭಿಯಂತರರು, ಇವರನ್ನು ನಿಯೋಜಿಸಿ, ದಿನಾಂಕ : 07–05–2021 ರಂದೇ ಆದೇಶ ಹೊರಡಿಸಲಾಗಿದೆ.

ಮೈಸೂರು ಮಹಾನಗರ ಪಾಲಿಕೆ ವತಿಯಿಂದ 6000ಲೀ ಸೋಡಿಯಂ ಹೈಪೋ ಕ್ಲೋರೈಡ್ ಮತ್ತು 4000 ಲೀ ಸೆಂಟೆಡ್ ಫೆನಾಯಿಲ್ ಖರೀದಿಸಲಾಗಿದ್ದು, ಸದರಿ ದ್ರವವನ್ನು 03 ಅಗ್ನಿ ಶಾಮಕ ವಾಹನಗಳು ಮತ್ತು 06 ಟ್ರಾಕ್ಟರ್‌ಗಳನ್ನು ಬಳಸಿಕೊಂಡು ಸಾರ್ವಜನಿಕ ಸ್ಥಳಗಳು, ಉದ್ಯಾನವನಗಳು, ಪ್ರಮುಖ ರಸ್ತೆಗಳು, ಮಾರುಕಟ್ಟೆಗಳಲ್ಲಿ ಔಷಧಿ ಸಿಂಪಡಿಸಲು ಕ್ರಮವಹಿಸಲಾಗಿದೆ. ವಾರ್ಡ್ ಮಟ್ಟದ ಕಾರ್ಯಾಚರಣೆ ಪಡೆಯು ವಾರ್ಡ್ ವ್ಯಾಪ್ತಿಯಲ್ಲಿ ಸೋಂಕಿತ ವ್ಯಕ್ತಿಗಳ ಮನೆಗಳಿಗೆ ಔಷಧಿ ಸಿಂಪಡಿಸಲು ಸಹ ಕ್ರಮವಹಿಸುತ್ತಿದ್ದಾರೆ. ಶ್ರೀಮತಿ. ಸಿಂಧು, ಕಾರ್ಯಪಾಲಕ ಅಭಿಯಂತರರು, ಒಳಚರಂಡಿ ವಿಭಾಗ, ಮೈಸೂರು ಮಹಾನಗರ ಪಾಲಿಕೆ ಮೈಸೂರು ಇವರನ್ನು ಈ ಕಾರ್ಯಕ್ಕಾಗಿ ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗಿದೆ.

ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯ ಸೋಂಕಿನ ಹರಡುವಿಕೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾರ್ಡ್ ಮಟ್ಟದ ಕಾರ್ಯಾಚರಣೆ ಪಡೆಯನ್ನು (WLTF) ರಚಿಸಲಾಗಿದ್ದು, ವಾರ್ಡ್ ಮಟ್ಟದ ಕಾರ್ಯಾಚರಣೆ ಪಡೆಯ ಎಲ್ಲಾ ಸದಸ್ಯರುಗಳಿಗೆ ಸುರಕ್ಷತಾ ದೃಷ್ಟಿಯಿಂದ ಕೋವಿಡ್–19 ಲಸಿಕೆ ಹಾಕಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಸಂಬಂಧಪಟ್ಟ ವಲಯ ಕಚೇರಿಗಳ ವಲಯ ಆಯುಕ್ತರುಗಳಿಗೆ ಜವಾಬ್ದಾರಿ ನಿಗಧಿಪಡಿಸಿ ದಿನಾಂಕ : 07–05–2021 ರಂದೇ ಆದೇಶ ಹೊರಡಿಸಲಾಗಿದೆ.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್–19 ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ CSR ಅನುದಾನದಿಂದ ಬರುವ ಮತ್ತು ಸರ್ಕಾರೇತರ ಸಂಸ್ಥೆಗಳಿಂದ (NGO) ಸ್ವೀಕೃತವಾಗುವ Pulse Oxymeter/Hand Sanitaizer/ Home Isolation Medical kit/ Oxygen Concentrators/Masks/Ambulance/Oxygen cylinder ಗಳನ್ನು ಪಡೆದು, ಸೂಕ್ತ ಸ್ಥಳದಲ್ಲಿ ದಾಸ್ತನಿರಿಸಿ, ಸದರಿ ಸಮಗ್ರಿಗಳನ್ನು ವಿತರಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಈ ಸಂಬಂಧ ಸ್ವೀಕೃತವಾಗುವ ಬೇಡಿಕೆಗಳು ಮತ್ತು ಲಭ್ಯವಿರುವ ದಾಸ್ತನಿನ ಅನುಸಾರ ವಿತರಣಾ ಕಾರ್ಯಕ್ಕೆ ಜವಾಬ್ದಾರಿಯುತ ನೋಡಲ್ ಅಧಿಕಾರಿಯನ್ನಾಗಿ ಮೈಸೂರು ಮಹಾನಗರ ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ) ಆದ ಶ್ರೀ.ಕೆ.ಎಸ್.ಮೃತ್ಯುಂಜಯ, ಇವರನ್ನು ನಿಯೋಜಿಸಿ ದಿನಾಂಕ : 07–05–2021 ರಂದೇ ಆದೇಶ ಹೊರಡಿಸಲಾಗಿದೆ.

..6

**CSR ಅನುದಾನದಿಂದ ಮತ್ತು ಸರ್ಕಾರೇತರ ಸಂಸ್ಥೆಗಳಿಂದ (NGO) ಸ್ವೀಕೃತವಾಗಿರುವ ಮತ್ತು ವಿತರಣೆ ಮಾಡಿರುವ ದಾಸ್ತನಿನ ವಿವರ ಈ ಕೆಳಕಂಡಂತಿದೆ:–**

## DETAILS OF SPONSOR'S

| SL NO | Sponsor | EQUIPMENT NAME | Quantity | Delivery Status |
|---|---|---|---|---|
| 1 | Hari Murari Trust | Pulse Oxy Meter | 180 | Delivered |
| 2 | Cycle Pure Agarbathies | Pulse Oxy Meter | 200 | Delivered |
| 3 | M/s Phoneix Health care Solutions Pvt Ltd | Mask | 1000 | Delivered |
| 4 | Ramesh Kikeri | Hand Sanitizer | 450 | Delivered |
| 5 | Aggarwal Samaja | Wood | 4(Loads) | Delivered |
| 6 | Lets Do it | Ambulance (2months) | 1 | Delivered |
| 7 | Ragu Lal Surgicals | Medical Kit | 1000 | Delivered |
| 8 | Rotary Mysore West Chairatable trust | Pulse Oxy Meter | 50 | Delivered |
| 9 | Reach Out | Pulse Oxy Meter | 50 | Delivered |
| 10 | Bhamy Shenoy | Pulse Oxy Meter | 15 | Delivered |
| 11 | Round Table 21 | Tablets | 9920 | Delivered |
| 12 | Past Chairman Of CII Mysure Zone | Home Isolation Kit | 170 | Delivered |
| 13 | Proprietor Millennium Moulds | Home Isolation Kit | 680 | Delivered |
| 14 | CIVIL 83 SJCE | Home Isolation Kit | 300 | Delivered |
| 15 | Agarwal Samaja | Home Isolation Kit | 1000 | Delivered |
| 16 | Agarwal Samaja | Medicines | 4 Boxes | Delivered |
| 17 | Mysore Polymers & Rubber Products Pvt. Ltd | Home Isolation Kit | 3200 | Delivered |
| 18 | Ramesh Kikeri | Medicines | 1 box | Delivered |
| 19 | Agarwal Samaja | Thermometers | 990 Pices | Delivered |
| 20 | Ragu Lal Surgicals | Drip stand | 11 | Delivered |
| | | oxygen valve with flow meter | 6 | Delivered |
| | | Foldable Strechers | 65 | Delivered |
| | | Stainless Steel Strechers | 10 | Delivered |
| 21 | Agarwal Samaja | Home Isolation Kit | 1000 | Delivered |
| 22 | M/S Unilog Content Solutions | Home Isolation Kit | 1200 | Delivered |
| 23 | Rane Madras Ltd | Home Isolation Kit | 1000 | Delivered |
| 24 | Young Indians Mysuru | Gloves | 500 | Delivered |
| | | Sanitiser | 100 | Delivered |
| 25 | ACCE | Hand Sanitizer | 4000 | Delivered |
| 26 | | Tablets | 15000 | Delivered |
| 27 | | Home Isolation Kit | 300 | Delivered |
| 28 | ITC | Ambulance | 1 | Delivered |
| 29 | Infosys | Jumbo cylinders | 24 | Delivered |
| | | oxygen concentrators | 25 | Delivered |
| 30 | Youth For seva | Pulse Oxy Meters | 200 | Delivered |
| | | Thermometers | 150 | Delivered |
| 31 | Round Table 21 | Home Isolation Kit | 340 | Delivered |
| 32 | Agarwal Samaja | Oxygen Buses | 2 | Delivered |

| SL NO | Sponsor | EQUIPMENT NAME | Quantity | Delivery Status |
|---|---|---|---|---|
| 33 | Plansee | Home Isolation Kit | 1000 | Delivered |
| | | oxygen Concentrators | 15 | Delivered |
| 34 | Triveni Power Transmission | Home Isolation Kit | 580 | Delivered |
| 35 | H and V Advanced Materials | Home Isolation Kit | 250 | Delivered |
| 36 | Agarwal Samaja | Oxygen Buses | 2 | Delivered |
| 37 | ilyf | Ambulance (2months) | 1 | Delivered |
| 38 | Kaynes Technologies Pvt Ltd | Wall Mounted Oxygen Flow meter | 100 | Delivered |
| 39 | Lunar | Home Isolation Kit | 4000 | Delivered |

## DETAILS OF DISTRUBUTION

### Pulse oxy meter Details

| SL NO | Date | Name of the organization | Equipment Name | Quantity |
|---|---|---|---|---|
| 1 | 8/5/2021 | District Health & Family Welfare officer | Pulse Oxymeter | 300 |
| 2 | 10/5/2021 | Home Isolation team | Pulse Oxymeter | 10 |
| 3 | 12/5/2021 | District Health & Family Welfare officer | Pulse Oxymeter | 46 |
| 4 | 12/5/2021 | NR Covid Mithra | Pulse Oxymeter | 3 |
| 5 | 12/5/2021 | KR Covid Mitra | Pulse Oxymeter | 2 |
| 6 | 5/15/2021 | KR Covid Mitra | Pulse Oxymeter | 2 |
| 7 | 5/17/2021 | Zone 1 WLTF | Pulse Oxymeter | 14 |
| 8 | 5/17/2021 | Zone 2 WLTF | Pulse Oxymeter | 16 |
| 9 | 5/17/2021 | Zone 3 WLTF | Pulse Oxymeter | 16 |
| 10 | 5/17/2021 | Zone 4 WLTF | Pulse Oxymeter | 12 |
| 11 | 5/17/2021 | Zone 5 WLTF | Pulse Oxymeter | 14 |
| 12 | 5/17/2021 | Zone 6 WLTF | Pulse Oxymeter | 10 |
| 13 | 5/17/2021 | Zone 7 WLTF | Pulse Oxymeter | 12 |
| 14 | 5/17/2021 | Zone 8 WLTF | Pulse Oxymeter | 18 |
| 15 | 5/17/2021 | Zone 9 WLTF | Pulse Oxymeter | 20 |
| 16 | 5/21/2021 | Chamudeshwari Covid Mitra | Pulse Oxymeter | 2 |
| 17 | 5/24/2021 | Vijayanagar Covid Mitra | Pulse Oxymeter | 3 |
| 18 | 5/24/2021 | WLTF (1 to 65 Wards) | Pulse Oxymeter | 130 |
| **Total** | | | | **630** |

### Hand Sanitizer Details

| SL NO | Date | Name of the organization | Equipment Name | Quantity |
|---|---|---|---|---|
| 1 | 9/5/2021 | CR Covid Mitra | Hand Sanitizer (100 ml) | 75 |
| 2 | 10/5/2021 | Zone 4 Do | Hand Sanitizer (100 ml) | 10 |
| 3 | 12/5/2021 | Nanjaraja Bhaudr Choutry Zone 6 | Hand Sanitizer (100 ml) | 50 |
| 4 | 12/5/2021 | NR Covid Mithra | Hand Sanitizer (100 ml) | 10 |
| 5 | 5/20/2021 | Zone 4 and Zone 5 | Hand Sanitizer (100 ml) | 466 |
| 6 | 5/21/2021 | MCC Vehicle Section | Hand Sanitizer (100 ml) | 260 |
| 7 | 5/21/2021 | Zone 7 | Hand Sanitizer (100 ml) | 260 |
| 8 | 5/21/2021 | Zone 6 | Hand Sanitizer (100 ml) | 309 |
| 9 | 5/21/2021 | Zone 2 | Hand Sanitizer (100 ml) | 208 |
| 10 | 5/21/2021 | Zone 3 | Hand Sanitizer (100 ml) | 218 |

| SL NO | Date | Name of the organization | Equipment Name | Quantity |
|---|---|---|---|---|
| 11 | 5/21/2021 | Zone 8 | Hand Sanitizer (100 ml) | 270 |
| 12 | 5/21/2021 | Zone 9 | Hand Sanitizer (100 ml) | 300 |
| 13 | 5/21/2021 | Zone 1 | Hand Sanitizer (100 ml) | 300 |
| 14 | 5/22/2021 | Nanjaraja Bhaudr Choutry Zone 6 | Hand Sanitizer (100 ml) | 10 |
| 15 | 5/24/2021 | Chamundeshwari Covid Mitra | Hand Sanitizer (100 ml) | 10 |
| 16 | 5/24/2021 | Zone 6 WLTF | Hand Sanitizer (100 ml) | 100 |
| 17 | 5/24/2021 | Vijayanagara Covid Mitra | Hand Sanitizer (100 ml) | 10 |
| 18 | 5/24/2021 | Abhay Team,Burial Ground Staff,Destititute Center stafff) | Hand Sanitizer (100 ml) | 120 |
| **Total** | | | | **2986** |

## Home Isolation Kits

| SL NO | Date | Name of the organization | Drug Name | Quantity |
|---|---|---|---|---|
| 1 | 12/5/2021 | Mysore Covid Telecare | Medical Kits | 850 |
| 2 | 12/5/2021 | PHC  Bannimantap | Medical Kits | 100 |
| 3 | 12/13/2021 | KR Covid Mitra | Medical Kits | 200 |
| 4 | 12/13/2021 | NR Covid Mithra | Medical Kits | 200 |
| 5 | 5/15/2021 | New DC office Home Isolation Team | Medical Kits | 500 |
| 6 | 5/17/2021 | Zone 6 WLTF | Medical Kits | 150 |
| 7 | 5/18/2021 | DHO | Medical Kits | 1000 |
| 8 | 5/18/2021 | Zone 1 WLTF | Medical Kits | 350 |
| 9 | 5/18/2021 | Zone 2 WLTF | Medical Kits | 400 |
| 10 | 5/18/2021 | Zone 3 WLTF | Medical Kits | 350 |
| 11 | 5/18/2021 | Zone 4 WLTF | Medical Kits | 250 |
| 12 | 5/18/2021 | Zone 5 WLTF | Medical Kits | 350 |
| 13 | 5/18/2021 | Zone 6 WLTF | Medical Kits | 250 |
| 14 | 5/18/2021 | Zone 7 WLTF | Medical Kits | 300 |
| 15 | 5/18/2021 | Zone 8 WLTF | Medical Kits | 450 |
| 16 | 5/18/2021 | Zone 9 WLTF | Medical Kits | 500 |
| 17 | 5/21/2021 | KR Covid Mitra | Medical Kits | 200 |
| 18 | 5/21/2021 | NR Covid Mithra | Medical Kits | 200 |
| 19 | 5/24/2021 | Vijayanagara COVID mitra | Medical Kits | 200 |
| 20 | 5/24/2021 | THO Mysuru | Medical Kits | 2100 |
| 21 | 5/24/2021 | NR Covid Mithra | Medical Kits | 200 |
| 22 | 5/24/2021 | Chamudeshwari COVID Mitra | Medical Kits | 200 |
| **SL NO** | **Date** | **Name of the organization** | **Drug Name** | **Quantity** |
| 23 | 5/24/2021 | WLTF (Zone 1 to 9) | Medical Kits | 900 |
| 24 | 5/25/2021 | DD Palace | Medical Kits | 920 |
| 25 | 5/31/2021 | KR Covid Mitra | Medical Kits | 200 |
| 26 | 5/25/2021 | BOOGADI COVID Care Center | Medical Kits | 100 |
| 27 | 5/29/2021 | Beedi Hospital | Medical Kits | 300 |
| 28 | 5/29/2021 | Zone 5 WLTF | Medical Kits | 50 |
| 29 | | Farooqia Covid Care center | Medical Kits | 200 |
| 30 | 1/6/2021 | Telecare | Medical Kits | 200 |
| 31 | 5/31/2021 | MCC Isolation Center | Medical Kits | 50 |
| 32 | 1/6/2021 | WLTF (Zone 1 to 9) | Medical Kits | 1400 |
| 33 | 1/6/2021 | DD Palace | Medical Kits | 1500 |
| **Total** | | | | **15120** |

| Oxygen Concentrators | | | | |
|---|---|---|---|---|
| **SL NO** | **Date** | **Name of the organization** | **Equipment Name** | **Quantity** |
| 1 | 24/05/2021 | Chamundeshwari Covid mitra | Oygen Concentrator | 5 |
| 2 | 24/05/2021 | Vijayanagar Covid mitra | Oygen Concentrator | 5 |
| 3 | 24/05/2021 | Beedi Hospital | Oygen Concentrator | 10 |
| 4 | 31/05/2021 | Boogadi Covid Care Center | Oygen Concentrator | 10 |
| 5 | 31/05/2021 | Farooiqa Covid care Center | Oygen Concentrator | 10 |
| **Total** | | | | **40** |

| Mask | | | | |
|---|---|---|---|---|
| **SL NO** | **Date** | **Name of the organization** | **Particulars** | **Quantity** |
| 1 | 9/5/2021 | NR Covid Mithra | Mask | 500 |
| 2 | 10/5/2021 | Zone 4 DO | Mask | 10 |
| 3 | 12/5/2021 | Nanjaraja Bhaudr Choutry Zone 6 | Mask | 50 |
| 4 | 5/22/2021 | Nanjaraja Bhaudr Choutry Zone 6 | Mask | 30 |
| 5 | 5/26/2021 | Volunteers | Mask | 60 |
| 6 | 5/29/2021 | Burial Ground Staff | Mask | 50 |
| **Total** | | | | **700** |

| DHO Office | | | | |
|---|---|---|---|---|
| **SL NO** | **Date** | **Name of the organization** | **Particulars** | **Quantity** |
| 1 | 5/8/2021 | District Health and Family Welfare Officer | Pulse Oxymeter | 300 |
| 2 | 5/18/2021 | District Health and Family Welfare Officer | Medical Kits | 1000 |
| 3 | 5/18/2021 | District Health and Family Welfare Officer | Foldable Strechers | 10 |
| 4 | 5/25/2021 | District Health and Family Welfare Officer | Manxoprin | 1000 |
| 5 | 5/12/2021 | District Health and Family Welfare Officer | Pulse Oxymeter | 46 |
| 6 | 5/27/2021 | KR Hospital | Wall Mounted Oxygen Flow Meters | 100 |
| 7 | 5/20/2021 | KR Hospital | Enaxopirin | 500 |
| 8 | 5/20/2021 | District Hospital | Amlodipine 5mg | 10000 |
| | | | Clopidogrel 75mg | 5000 |
| | | | Enaxopirin | 500 |
| 9 | 5/12/2021 | Covid Care Center | Favipiravir | 4920 |
| | | | Ivermectin | 5000 |

| As per the orders issued by the Deputy Commissioner, Mysuru District, Mysuru,vide no : MYSDC/CAL/13/2021, dated 01-06-2021, below items is handed over to the Deputy Director, Palace Borad, Mysuru | | | | |
|---|---|---|---|---|
| **SL NO** | **Date** | **Name of the organization** | **Particulars** | **Quantity** |
| 1 | 5/25/2021 | DD Palace | Azithromycin | 300 |
| 2 | 5/25/2021 | DD Palace | Foldable Strechers | 55 |
| 3 | 5/25/2021 | DD Palace | Hand Sanitizer(100 ml) | 1464 |
| 4 | 5/25/2021 | DD Palace | Paracetamol | 900 |
| 5 | 5/25/2021 | DD Palace | Montelukast and Levocetrizine | 700 |
| 6 | 5/25/2021 | DD Palace | Drip stand | 11 |
| 7 | 5/25/2021 | DD Palace | Thermometers | 1140 |

| SL NO | Date | Name of the organization | Particulars | Quantity |
|---|---|---|---|---|
| 8 | 5/25/2021 | DD Palace | Pulse oxymeter | 65 |
| 9 | 5/25/2021 | DD Palace | Surgical Mask | 300 |
| 10 | 5/25/2021 | DD Palace | Oxygen valve with flow meters | 6 |
| 11 | 5/25/2021 | DD Palace | Medical Kit | 920 |
| 12 | 1/6/2021 | DD Palace | Medical Kit | 1500 |
| **Total** | | | | **7361** |

| **Ambulance** | | | | |
|---|---|---|---|---|
| **SL NO** | **Date** | **Name of the organization** | **Particulars** | **Quantity** |
| 1 | 5/12/2021 | SMT COVID Mitra | Ambulance | 1 |
| 2 | 5/23/2021 | Charaka Hospital | Ambulance | 1 |
| 3 | 5/29/2021 | Vijayanagar COVID Mitra | Ambulance | 1 |
| **Total** | | | | **3** |

| **Cylinder** | | | | |
|---|---|---|---|---|
| **SL NO** | **Date** | **Name of the organization** | **Particulars** | **Quantity** |
| 1 | 5/25/2021 | Beedi Hospital | JUMBO CYCLINDER | 24 |

Oxygen On Wheels ಎಂಬ ಕಾರ್ಯಕ್ರಮವನ್ನು ಮೈಸೂರು ಮಹಾನಗರ ಪಾಲಿಕೆ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಹಭಾಗಿತ್ವದಲ್ಲಿ ದಿನಾಂಕ ; 29–05–2021 ರಂದು ಪ್ರಾರಂಭಿಸಲಾಗಿದ್ದು, ಅಗರ್‌ವಾಲ್ ಸಮಾಜ ರವರಿಂದ 02 ವಾಹನಗಳು ಮತ್ತು ಕೆ.ಎಸ್.ಆರ್.ಟಿ.ಸಿ ಯಿಂದ (ಜೈನ್ ಸಮಾಜದವರ ಕೊಡುಗೆ) 04 ವಾಹನಗಳನ್ನು ಒದಗಿಸಲಾಗಿದ್ದು, ಸದರಿ ವಾಹನಗಳಿಗೆ ಶೂಶ್ರುಷಕರ ಸೇವೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕಲ್ಪಿಸಲಾಗಿದೆ.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಈ ಕೆಳಕಂಡ 05 ಪ್ರದೇಶಗಳಲ್ಲಿ ಈಗಾಗಲೇ **"ಕೋವಿಡ್ ಮಿತ್ರಾ ಸೆಂಟರ್"** ಗಳನ್ನು ಪ್ರಾರಂಭಿಸಲಾಗಿದ್ದು, ಮನೆಯ ಪ್ರತ್ಯೇಕತೆಯಲ್ಲಿರುವ (HOME ISOLATION) ಸೋಂಕಿತರನ್ನು ಕೋವಿಡ್ ಮಿತ್ರಾ ಸೆಂಟರ್‌ಗಳಿಗೆ ದಾಖಲಿಸಲು ಕೈಗೊಂಡಿರುವ ವ್ಯವಸ್ಥೆ.

| **ಕ್ರ.ಸಂ** | **ಕೋವಿಡ್ ಮಿತ್ರಾ ಸೆಂಟರ್** | **ಹಾಸಿಗೆಯ ಸಾಮರ್ಥ್ಯ** | **ಪ್ರಾರಂಭಗೊಂಡ ದಿನಾಂಕ** |
|---|---|---|---|
| 1 | ಸೇಠ್ ಮೋಹನ್‌ದಾಸ್ ತುಳಸಿದಾಸ್ ಆಸ್ಪತ್ರೆ, ಜೆ.ಎಲ್.ಬಿ. ರಸ್ತೆ, ಮೈಸೂರು. | 56 | 04–05–2021 |
| 2 | ಪಂಚಕರ್ಮ ಆಯುರ್ವೇದ ಆಸ್ಪತ್ರೆ, ಕೆ.ಆರ್.ಎಸ್.ರಸ್ತೆ, ಮೈಸೂರು | 35 | 04–05–2021 |
| 3 | ಬೀಡಿ ಕಾರ್ಮಿಕರ ಆಸ್ಪತ್ರೆ, ರಾಜೀವ್ ನಗರ, ಮೈಸೂರು | 200 | 04–05–2021 |
| 4 | ವಿಶ್ವಪ್ರಜ್ಞಾ ವಿದ್ಯಾಸಂಸ್ಥೆ, ದಟ್ಟಗಳ್ಳಿ, ಮೈಸೂರು | 15 | 24–05–2021 |
| 5 | ಪಟ್ಟಣ ಯೋಜನಾ ಕಟ್ಟಡ ಹಿನಕಲ್–ಬೋಗಾದಿ ರಿಂಗ್ ರಸ್ತೆ, ಮೈಸೂರು. | 14 | 24–05–2021 |

ಮೇಲಿನ ಕೋವಿಡ್ ಮಿತ್ರಾ ಸೆಂಟರ್‌ಗಳು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕಾಗಿ, ಮೈಸೂರು ಮಹಾನಗರ ಪಾಲಿಕೆ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಹಭಾಗಿತ್ವದಲ್ಲಿ 31 ವೈದ್ಯರು ಮತ್ತು 33 ಶುಶ್ರೂಷಕರುಗಳನ್ನು ಗುತ್ತಿಗೆ ಆಧಾರದ ಮೇಲೆ 03 ತಿಂಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಸದರಿಯವರುಗಳಿಗೆ ಗೌರವಧನವನ್ನು ಎರಡು ಸಂಸ್ಥೆಗಳಿಂದ ಭರಿಸಲಾಗುತ್ತದೆ. ಅಗತ್ಯವಿದ್ದಲ್ಲಿ ಹೆಚ್ಚಿನ ವೈದ್ಯರು ಮತ್ತು ಶುಶ್ರೂಷಕರುಗಳ ಸೇವೆಯನ್ನು ಪಡೆಯಲು ಪಾಲಿಕೆಯು ಸನ್ನದ್ದವಾಗಿದೆ. ಎಲ್ಲಾ ಕೋವಿಡ್ ಮಿತ್ರಾ ಸೆಂಟರ್‌ಗಳ ಜವಾಬ್ದಾರಿಯನ್ನು ನೋಡಿಕೊಳ್ಳುವುದಕ್ಕಾಗಿ ಶ್ರೀ.ಡಿ.ಬಿಳಿಗಿರಿರಂಗಸ್ವಾಮಿ, ಉಪ ಆಯುಕ್ತರು(ಅಭಿವೃದ್ಧಿ) ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

<u>**ಮುಂದುವರೆದು , ಮೈಸೂರು ಮಹಾನಗರ ಪಾಲಿಕೆ ಮತ್ತು ಜಿಲ್ಲಾಡಳಿತದ ವತಿಯಿಂದ ಈ ಕೆಳಕಂಡ ಪ್ರದೇಶಗಳಲ್ಲಿ "ಮೈಸೂರು ಕೋವಿಡ್ ಆರೈಕೆ ಕೇಂದ್ರ" ಗಳನ್ನು ಸ್ಥಾಪಿಸಲಾಗಿರುತ್ತದೆ.**</u>

| | Hospital name and Address | Availability |
|---|---|---|
| 1 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಭವನ, ಮಂಡಕಳ್ಳಿ<br>KSOU Bhavan, Mandakalli | 525 Beds |
| 2 | ಪಂಚಕರ್ಮ ಹೈ-ಟೆಕ್ ಆಸ್ಪತ್ರೆ, ಕೆ.ಆರ್.ಎಸ್ ರಸ್ತೆ<br>Panchakarma Hi-tech Hospital, K.R.S Road | 35 Beds |
| 3 | ಬೀಡಿ ಕಾರ್ಮಿಕರ ಆಸ್ಪತ್ರೆ, ಎನ್.ಆರ್ ಮೊಹಲ್ಲಾ<br>Beedi Workers Hospital, N.R Mohalla | 150 Beds |
| 4 | ಫಾರೂಕಿಯಾ ಕಾಲೇಜ್ ಆಫ್ ಫಾರ್ಮಸಿ, ಉದಯಗಿರಿ<br>Farooqia College Of Pharmacy, Udayagiri | 100 Beds |
| 5 | ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿ ನಿಲಯ, ಬೋಗಾಧಿ<br>Technical and Medical Student Quarters, Bogadhi | 51 Beds |
| 6 | ಪದವಿ ಪೂರ್ವ ಬಾಲಕರ ವಸತಿ ನಿಲಯ , 2ನೇ ಹಂತ , ಬೋಗಾದಿ<br>P U Boys Hostel, 2nd stage, Bogadhi | 57 Beds |
| 7 | ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ವಸತಿ ನಿಲಯ<br>Pre-Metric and Post-Metric Girls Hostel, Kuvempunagar | 80 Beds |
| 8 | ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ವೈದ್ಯಕೀಯ ಯೋಗ ಆಸ್ಪತ್ರೆ, ಬೃಂದಾವನ ಲೇಔಟ್.<br>Government Nature Cure & Yoga Medical Hospital, Brindavan Layout | 60 Beds |
| 9 | ಮಹಿಳೆಯರಿಗೆ ಕೋವಿಡ್ ಕಾಳಜಿ ಕೇಂದ್ರ,<br>ಅಂತರಾಷ್ಟ್ರಿಯ ಯುವಕರ ವಸತಿ ನಿಲಯ, ಗೋಕುಲಂ.<br>Covid Care Center for Women, International Youth Hostel, Gokulam | 64 Beds |

ಕೋವಿಡ್ ಮಿತ್ರಾ ಮತ್ತು ಮೈಸೂರು ಕೋವಿಡ್ ಆರೈಕೆ ಕೇಂದ್ರಗಳ ನಿರ್ವಹಣೆಗಾಗಿ ಈ ಕೆಳಕಂಡ ಉಪಕರಣಗಳು/ಔಷಧಿಗಳು ಅವಶ್ಯಕವಿದ್ದು, ತುರ್ತಾಗಿ ಒದಗಿಸಿಕೊಡುವಂತೆ ಈಗಾಗಲೇ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು, ರವರಿಗೆ ಪತ್ರ ಬರೆದು ಕೋರಲಾಗಿದೆ.

| **ಕ್ರ.ಸಂ** | **ಔಷಧಿಗಳ ವಿವರ** | **ನರಸಿಂಹರಾಜ ವಿಧಾನ ಸಭಾ ಕ್ಷೇತ್ರ** | **ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರ** | | **ಕೃಷ್ಣರಾಜ ವಿಧಾನ ಸಭಾ ಕ್ಷೇತ್ರ** | **ಚಾಮರಾಜ ವಿಧಾನ ಸಭಾ ಕ್ಷೇತ್ರ** |
|---|---|---|---|---|---|---|
| | | ಫರೂಕಿಯಾ ಡೆಂಟಲ್ ಕಾಲೇಜು, ತಿಲಕ್ ನಗರ, ಮೈಸೂರು **(100 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ)** | ಇಂಜಿನಿಯರಿಂಗ್ & ಮೆಡಿಕಲ್ ಬಾಯ್ಸ್ ಹಾಸ್ಟೆಲ್, ಬೋಗಾದಿ 2ನೇ ಹಂತ, ಬೋಗಾದಿ ನಾರ್ತ್, ಮೈಸೂರು **(51 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ)** | ಪಿ.ಯು ಬಾಯ್ಸ್ ಹಾಸ್ಟೆಲ್, ಬೋಗಾದಿ 2ನೇ ಹಂತ, ಬೋಗಾದಿ ನಾರ್ತ್, ಮೈಸೂರು **(57 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ)** | ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕಿಯ ವಿದ್ಯಾರ್ಥಿ ನಿಲಯ, ಆರ್.ಎಂ.ಪಿ ಕ್ವಾಟ್ರಸ್ ಎದುರು ಕುವೆಂಪು ನಗರ, ಮೈಸೂರು **(139 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ)** | ಗೌರ್ಮೆಂಟ್ ನೇಚರ್ ಕ್ಯೂರ್ & ಯೋಗ ಮೆಡಿಕಲ್ ಹಾಸ್ಪಿಟಲ್, ಪಂಚಕರ್ಮ ಆಸ್ಪತ್ರೆ ಎದುರು, ಬೃಂದಾವನ ಬಡಾವಣೆ, ಮೈಸೂರು **(160 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ)** |
| **1.** | Doctors | 03 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 03 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 03 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 03 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 03 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) |
| **2.** | Staff nurse | 09 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 09 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 09 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 09 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 09 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) |
| **3.** | D Group | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) |

..12

| | | | | | | |
|---|---|---|---|---|---|---|
| 4. | Sweepers | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) | 06 (03 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು) |
| 5. | B.P Operator | 05 | 05 | 05 | 05 | 05 |
| 6. | Bed sheets and Pillow cover | 250 | 150 | 170 | 500 | 500 |
| 7. | Oxygen Concentrators | 10 | 10 | 10 | 10 | 10 |
| 8. | Dolo 650 | 5000 | 5000 | 5000 | 5000 | 5000 |
| 9. | Invermectin 12mg | 5000 | 5000 | 5000 | 5000 | 5000 |
| 10. | Zink | 5000 | 5000 | 5000 | 5000 | 5000 |
| 11. | Vitamin C | 5000 | 5000 | 5000 | 5000 | 5000 |
| 12. | Doxycicline100mg MG | 2500 | 2500 | 2500 | 2500 | 2500 |
| 13. | Azithromycine 500 MG | 2500 | 2500 | 2500 | 2500 | 2500 |
| 14. | Examination Gloves | 5000 | 5000 | 5000 | 5000 | 5000 |
| 15. | Surgical gloves | 5000 | 5000 | 5000 | 5000 | 5000 |
| 16. | Drips stand | 10 | 10 | 10 | 10 | 10 |
| 17. | N-95 Mask | 5000 | 5000 | 5000 | 5000 | 5000 |
| 18. | Face shield | 200 | 200 | 200 | 200 | 200 |
| 19. | Sanitizer | 25 ಲೀ. | 25 ಲೀ. | 25 ಲೀ. | 25 ಲೀ. | 25 ಲೀ. |
| 20. | Semi PPE Kits | 500 | 500 | 500 | 500 | 500 |
| 21. | Plastic mug | 50 | 50 | 50 | 50 | 50 |
| 22. | Pulls Oxy meter | 10 | 10 | 10 | 10 | 10 |
| 23. | Dustbin (Red and Green) | 50 | 50 | 50 | 50 | 50 |
| 24. | Dustbin cover | 250 | 250 | 250 | 250 | 250 |
| 25. | Nosal Cannula | 25 | 25 | 25 | 25 | 25 |
| 26. | Fluied: RL / DNS / 5% DEXT | 50 | 50 | 50 | 50 | 50 |
| 27. | Thermal Scanner | 05 | 05 | 05 | 05 | 05 |
| 28. | Steem innelars | 10 | 10 | 10 | 10 | 10 |
| 29. | PPE Kit | 500 | 500 | 500 | 500 | 500 |

ಕೋವಿಡ್–19 ತುರ್ತು ಪರಿಸ್ಥಿತಿ ನಿಭಾಯಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರು ಮಹಾನಗರ ಪಾಲಿಕೆಯ ಪೌರಾಕಾರ್ಮಿಕರುಗಳಿಗೆ ಪ್ರತಿ ದಿನ ಹಾಜರಾತಿ ಸಮಯದಲ್ಲಿ ಥರ್ಮಲ್ ಸ್ಕ್ಯಾನಿಂಗ್ ಮಾಡಿಸುವುದು, ಕೋವಿಡ್–19 ಪಾಸಿಟಿವ್ ಪ್ರಕರಣಗಳು ವರದಿಯಾದ ಮನೆಗಳಿಗೆ ಸ್ಯಾನಿಟೈಸೇಷನ್ ಮಾಡುವ ಪೌರಾಕಾರ್ಮಿಕರುಗಳು ಕಡ್ಡಾಯವಾಗಿ ಪಿ.ಪಿ.ಇ. ಕಿಟ್ ಧರಿಸುವುದು, ಪ್ರತಿ 15 ದಿನಗಳಿಗೊಮ್ಮೆ ಎಲಾ ಪೌರಾಕಾರ್ಮಿಕರುಗಳಿಗೆ ಆರೋಗ್ಯ ತಪಾಸಣೆ ಮಾಡಿಸುವುದು, ಪೌರಾಕಾರ್ಮಿಕರ ಕುಟುಂಬಗಳಿಗೆ ಕಡ್ಡಾಯವಾಗಿ ಕೋವಿಡ್–19 ಲಸಿಕೆ ಹಾಕಿಸುವುದು ಮತ್ತು ಕೋವಿಡ್–19 ಪಾಸಿಟಿವ್ ಪೌರಾಕಾರ್ಮಿಕರುಗಳಿಗೆ ಸೂಕ್ತ ಚಿಕಿತ್ಸೆ ಒದಗಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ವಲಯ ಆಯುಕ್ತರು, ಪರಿಸರ ಅಭಿಯಂತರರು, ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರುಗಳಿಗೆ ಸೂಚಿಸಿ, ದಿನಾಂಕ : 07–05–2021 ರಂದೇ ಆದೇಶ ಹೊರಡಿಸಲಾಗಿರುತ್ತದೆ.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್–19 ಸೋಂಕಿನಿಂದ ಮೃತಪಟ್ಟ ವ್ಯಕ್ತಿಗಳ ಅಂತ್ಯಸಂಸ್ಕಾರಕ್ಕಾಗಿ ಚಿತಾಗಾರಗಳು/ ಸ್ಮಶಾನಗಳನ್ನು ಗುರುತಿಸಿ, ಮೇಲ್ವಿಚಾರಣೆ/ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ದಿನಾಂಕ : 30–04–2021 ರಂದು ಹೊರಡಿಸಿರುವ ಅಧಿಕೃತ ಜ್ಞಾಪನವನ್ನು ಮುಂದುವರೆಸುತ್ತಾ, ಸದರಿ ಅಧಿಕೃತ ಜ್ಞಾಪನದಲ್ಲಿ ಗುರುತಿಸಲಾಗಿರುವ ಚಿತಾಗಾರಗಳು/ಸ್ಮಶಾನಗಳಲ್ಲಿ ಅಂತ್ಯ ಸಂಸ್ಕಾರಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಜವಾಬ್ದಾರಿಯನ್ನು ಸಂಬಂಧಪಟ್ಟ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ವಲಯ ಆಯುಕ್ತರುಗಳಿಗೆ ಮೇಲುಸ್ತುವಾರಿ ನೋಡಿಕೊಳ್ಳಲು ದಿನಾಂಕ : 09–05–2021 ರಂದೇ ಆದೇಶ ಹೊರಡಿಸಲಾಗಿದೆ.

ಮೈಸೂರು ಮಹಾನಗರ ಪಾಲಿಕೆ ವಾಣಿ ವಿಲಾಸ ನೀರು ಸರಬರಾಜು ವಿಭಾಗದಲ್ಲಿ ಅಗತ್ಯ ಸೇವೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವರ್ಗದ ಅಧಿಕಾರಿ/ಸಿಬ್ಬಂದಿಗಳ ಹಿತದೃಷ್ಟಿಯನ್ನು ಕಾಯುವ ನಿಟ್ಟಿನಲ್ಲಿ ಲಸಿಕೆ ಹಾಕಿಸಲು ಕ್ರಮವಹಿಸುವುದು, ವಾಟರ್ ಇನ್ಸ್‌ಪೆಕ್ಟರ್, ವಾಲ್ವ್‌ಮೆನ್ ಮತ್ತು ಮೀಟರ್ ರೀಡರ್‌ಗಳು ದಿನನಿತ್ಯ ಹ್ಯಾಂಡ್ ಗ್ಲೌಸ್, ಮಾಸ್ಕ್, ಮುಂತಾದ ಸುರಕ್ಷಾ ಕವಚಗಳನ್ನು ಕಡ್ಡಾಯವಾಗಿ ಧರಿಸಿಕೊಂಡು ಕೆಲಸ ನಿರ್ವಹಿಸುವಂತೆ ಕ್ರಮವಹಿಸುವುದು, ಎಲ್ಲಾ ವಿಭಾಗೀಯ ಕಚೇರಿಗಳಲ್ಲಿ ಎಲ್ಲಾ ವರ್ಗದ ಅಧಿಕಾರಿ/ಸಿಬ್ಬಂದಿಗಳಿಗೆ ಲಭ್ಯವಾಗಿರುವಂತೆ ಹ್ಯಾಂಡ್ ಸ್ಯಾನಿಟೈಸರ್ / ಸೋಪ್ ಸಲ್ಯೂಷನ್ ಅನ್ನು ಒದಗಿಸುವುದು ಹಾಗೂ ಸದರಿ ಹ್ಯಾಂಡ್ ಸ್ಯಾನಿಟೈಸರ್ / ಸೋಪ್ ಸಲ್ಯೂಷನ್ ಅನ್ನು ಸಾಕಷ್ಟು ಪ್ರಮಣದಲ್ಲಿ ಲಭ್ಯವಿದ್ದು, ಉಪಯೋಗಿಸುವುದನ್ನು ಖಾತರಿ ಪಡಿಸಿಕೊಳ್ಳುವುದು. ಅಧಿಕಾರಿ/ಸಿಬ್ಬಂದಿ ವರ್ಗದಲ್ಲಿ ಜ್ವರ, ಶೀತ,ಕೆಮ್ಮು ಇತರೇ ರೋಗಲಕ್ಷಣಗಳು ಕಂಡುಬಂದಲ್ಲಿ, ಕೂಡಲೇ ಆರೋಗ್ಯ ತಪಾಸಣೆಯನ್ನು ಮಾಡಿಸಿ ಅಗತ್ಯ ಚಿಕಿತ್ಸೆ ಕೊಡಿಸುವುದು ಮತ್ತು ಜನಸಂದಣೆ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ನೀರು ಸರಬರಾಜು ಸಿಬ್ಬಂದಿಗಳ ಮೇಲೆ ಅಗತ್ಯ ನಿಗಾವಹಿಸಿ ವೈಯಕ್ತಿಕ ಶುಚಿತ್ವ ಕಾಪಾಡಿ ಕೊಳ್ಳುವಂತೆ ತಿಳುವಳಿಕೆ ನೀಡುವುದು ಹಾಗೂ ಸಾರ್ವಜನಿಕರ ಹಾಗೂ ತಮ್ಮ ಮಧ್ಯೆ ಕನಿಷ್ಟ ಅಂತರವನ್ನು ಕಾಪಾಡಿಕೊಳ್ಳುವಂತೆ ಎಚ್ಚರ ವಹಿಸುವುದಕ್ಕೆ ಸಂಬಂಧಿಸಿದಂತೆ ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಿ ನೀರು ಸರಬರಾಜು ಕಾರ್ಯದಲ್ಲಿ ತೊಡಗುವಂತೆ ಅಗತ್ಯ ಕ್ರಮವಹಿಸಲು ಶ್ರೀ.ಡಿ.ಬಿಳಿಗಿರಿರಂಗಸ್ವಾಮಿ, ಉಪ ಆಯುಕ್ತರು(ಅಭಿವೃದ್ಧಿ) ಮತ್ತು ಶ್ರೀಮತಿ.ಜಿ.ಸುವರ್ಣ, ಕಾರ್ಯಪಾಲಕ ಅಭಿಯಂತರರು, ನೀರು ಸರಬರಾಜು ವಿಭಾಗ, ಮೈಸೂರು ಮಹಾನಗರ ಪಾಲಿಕೆ ಮೈಸೂರು ಇವರುಗಳಿಗೆ ಸೂಚಿಸಿ ದಿನಾಂಕ : 10–05–2021 ರಂದೇ ಆದೇಶ ಹೊರಡಿಸಲಾಗಿದೆ.

**ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕೋವಿಡ್–19 ಸೋಂಕಿತ ವ್ಯಕ್ತಿಗಳಿಗೆ ಸಹಾಯವಾಣಿ – ಕೋವಿಡ್ ಟೆಲಿ ಆರೈಕೆ ಕೇಂದ್ರ ಸ್ಥಾಪಿಸಿರುವ ಬಗ್ಗೆ**

- ಕೋವಿಡ್–19 ಎರಡನೇ ಅಲೆಯು ಅನೇಕ ಸವಾಲುಗಳನ್ನು ತಂದೊಡ್ಡಿದೆ. ಇದು ಸೋಂಕಿತ ವ್ಯಕ್ತಿಗಳು ಮತ್ತು ಸಾರ್ವಜನಿಕರಲ್ಲಿ ಭಯ ಸೃಷ್ಟಿಸಿದೆ. ವೈದ್ಯಕೀಯ ಆರೈಕೆಗಾಗಿ ಆಸ್ಪತ್ರೆಗಳ ಮೇಲೆ ಒತ್ತಡ ಹೆಚ್ಚಾಗುತ್ತಿದ್ದು, ಹಾಸಿಗೆಗಳು, ಆಮ್ಲಜನಕ, ವೆಂಟಿಲೇಟರ್‌ಗಳು ಮತ್ತು ಐಸಿಯು ಹಾಸಿಗೆಗಳಿಗಾಗಿ ಬೇಡಿಕೆಗಳು ಹೆಚ್ಚುತ್ತಿವೆ. ಆಡಳಿತವು ಅದರ ಪ್ಯಾನಿಕ್ ರೋಗಿಗಳಿಗೆ ಅಗತ್ಯಕ್ಕಿಂತ ಹೆಚ್ಚಾಗಿ ಆಸ್ಪತ್ರೆಗೆ ಹೋಗಲು ಪ್ರೇರೇಪಿಸುತ್ತದೆ ಎಂದು ಗಮನಿಸಿದೆ. ಅಂತಹ ಪ್ಯಾನಿಕ್ ರಶ್‌ಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ, ಮೈಸೂರು ಮಹಾನಗರ ಪಾಲಿಕೆಯು ಸಿಟಿಜನ್ಸ್ ಫೋರಂ ಆಫ್ ಮೈಸೂರು (Citizen forum of Mysuru) ಸಹಯೋಗದೊಂದಿಗೆ ಕೋವಿಡ್ ಟೆಲಿಕೇರ್ ಸೌಲಭ್ಯವನ್ನು ಹೊರತಂದಿದೆ. ಕೋವಿಡ್ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಜಿಲ್ಲಾಡಳಿತದೊಂದಿಗೆ ಕೈಜೋಡಿಸಲು ಸ್ವಯಂಪ್ರೇರಿತರಾಗಿರುವ ಅನೇಕ ವ್ಯಕ್ತಿಗಳೊಂದಿಗೆ ರೋಟರಿ ಮೈಸೂರು, ಇತರ ರೋಟರಿ ಕ್ಲಬ್‌ಗಳು, ರೋಟ್ರಾಕ್ಟ್, ಕ್ರೆಡೈ, ಬಿಎಐ, ವೈಎ, ಜಿಎಸ್‌ಎಸ್, ಥೇರಾಪಂತ್ ಮತ್ತು ರೀಚೌಟ್ ಟ್ರಸ್ಟ್ ಸೇರಿದಂತೆ ಸಂಸ್ಥೆಗಳನ್ನು ಈ ವೇದಿಕೆ ಒಳಗೊಂಡಿದೆ.
- ರೋಟರಿ ಮೈಸೂರಿನ ಆವರಣದಲ್ಲಿ ಟೆಲಿಕೇರ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ಟೆಲಿಕೇರ್ ಕೇಂದ್ರವು ತರಬೇತಿ ಪಡೆದ ಸ್ವಯಂಸೇವಕರು ನಿರ್ವಹಿಸುವ ಮೀಸಲಾದ ದೂರವಾಣಿ ಮಾರ್ಗಗಳನ್ನು ಹೊಂದಿರುತ್ತದೆ. ಪಾಳಿಯಲ್ಲಿ ಕೆಲಸ ಮಾಡುವ ಅಗತ್ಯ ಸಂಖ್ಯೆಯ ಸ್ವಯಂಸೇವಕರು ರೋಗಿಗಳು ಅಥವಾ ಅವರ ಉಸ್ತುವಾರಿಗಳಿಂದ ಕರೆಗಳನ್ನು ಸ್ವೀಕರಿಸುತ್ತಾರೆ. ರೋಗಿಗಳು ಹೊಂದಿರುವ ರೋಗಲಕ್ಷಣಗಳ ಸ್ವರೂಪವನ್ನು ದಾಖಲಿಸಿದ ನಂತರ, ಸ್ವಯಂಸೇವಕರು ಈ ಉಪಕ್ರಮದೊಂದಿಗೆ ಸ್ವಯಂಪ್ರೇರಿತರಾಗಿ ಕೈಜೋಡಿಸಿದ ಎಂಪ್ಯಾನಲ್ಡ್ ವೈದ್ಯರೊಂದಿಗೆ ರೋಗಿಗಳ ವಿವರಗಳನ್ನು ಹಂಚಿಕೊಳ್ಳುತ್ತಾರೆ.

- ಈ ಉದ್ದೇಶಕ್ಕಾಗಿ ಸ್ವಯಂಪ್ರೇರಿತರಾಗಿ 40 ಕ್ಕೂ ಹೆಚ್ಚು ವೈದ್ಯರಿದ್ದಾರೆ. ಜೊತೆಗೆ 35 U.S-based doctors, Dr.Raghunath, Pulmonary Critical Care Physician, Gopal Gowda Hospital, Mysuru, & Dr.Chethak, Paediatrician JSS Hospital Mysuru ರವರುಗಳು ಸಹ ಒಳಗೊಂಡಿರುತ್ತಾರೆ. ವೈದ್ಯರಿಗೆ ಈಗಾಗಲೇ ಆಡಳಿತವು ವಿವರವಾದ ದೃಷ್ಟಿಕೋನವನ್ನು ನೀಡಿದೆ. ಸ್ವಯಂಸೇವಕರಿಂದ ಮೂಲಭೂತ ಮಾಹಿತಿಯನ್ನು ಪಡೆದಾಗ, ಆ ಸಮಯದಲ್ಲಿ ಲಭ್ಯವಿರುವ ವೈದ್ಯರು ಕರೆ ಮಾಡಿ ರೋಗಿಯೊಂದಿಗೆ ಸಮಾಲೋಚನೆ ನಡೆಸುತ್ತಾರೆ. ರೋಗಿಯೊಂದಿಗೆ ಸಮಾಲೋಚನೆ ನಡೆಸಿದ ಆಧಾರದ ಮೇಲೆ ವೈದ್ಯರು ರೋಗಿಗಳನ್ನು 4 ವಿವಿಧ ವರ್ಗಗಳಾಗಿ ವರ್ಗೀಕರಿಸುತ್ತಾರೆ. ಮನೆ ಪ್ರತ್ಯೇಕತೆಗಾಗಿ ಯೋಗ್ಯವಾದ ಕೋವಿಡ್‌ನ ಸೌಮ್ಯ ರೋಗಲಕ್ಷಣಗಳನ್ನು ಹೊಂದಿರುವ ರೋಗಿಗಳು, ಮಧ್ಯಮದಿಂದ ತೀವ್ರವಾದ ಸೋಂಕಿನ ರೋಗಿಗಳು ಕೋವಿಡ್ ಆರೈಕೆ ಕೇಂದ್ರ ಅಥವಾ ಆಸ್ಪತ್ರೆಗಳನ್ನು ಉಲ್ಲೇಖಿಸಲು ಹೊಂದಿಕೊಳ್ಳುತ್ತಾರೆ. ರೋಗಿಗಳನ್ನು ದೈಹಿಕವಾಗಿ ಪರೀಕ್ಷಿಸಬೇಕಾಗಿದೆ ಎಂದು ವೈದ್ಯರು ಭಾವಿಸಿದರೆ, ಅವರು ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ಥಾಪಿಸಿರುವ ಮತ್ತು ಕ್ರಿಯಾತ್ಮಕವಾಗಿರುವ ಹತ್ತಿರದ ಕೋವಿಡ್ ಮಿತ್ರಾಗೆ ರೋಗಿಗಳನ್ನು ಉಲ್ಲೇಖಿಸುತ್ತಾರೆ.
- ಮನೆ ಪ್ರತ್ಯೇಕತೆಗಾಗಿ ವೈದ್ಯರು ಶಿಫಾರಸ್ಸು ಮಾಡಿದ ರೋಗಿಗಳ ಡೇಟಾವನ್ನು ವೈದ್ಯರು ಟೆಲಿ ಕೇರ್ ಕೇಂದ್ರದೊಂದಿಗೆ ಹಂಚಿಕೊಳ್ಳುತ್ತಾರೆ. ಸ್ವಯಂಸೇವಕರು ಮನೆ ಪ್ರತ್ಯೇಕತೆಗೆ ಶಿಫಾರಸ್ಸು ಮಾಡಿದ ರೋಗಿಗಳನ್ನು ಅನುಸರಿಸುತ್ತಾರೆ ಮತ್ತು ಅವರಿಗೆ ಪಾಲಿಕೆ ವತಿಯಿಂದ (ಸಿ.ಎಸ್.ಆರ್ ನಿಂದ ಸಂಗ್ರಹಿಸಲ್ಪಟ್ಟ) ಉಚಿತವಾಗಿ ವೈದ್ಯಕೀಯ ಕಿಟ್ ಅನ್ನು ತಲುಪಿಸುತ್ತಾರೆ. ವೈದ್ಯಕೀಯ ಕಿಟ್‌ನಲ್ಲಿ ವೈದ್ಯರು ಶಿಫಾರಸ್ಸು ಮಾಡಿದ ಔಷಧಿಗಳು ಒಳಗೊಂಡಿರುತ್ತದೆ ಹಾಗೂ ಮಾಡಬೇಕಾದ ಮತ್ತು ಮಾಡಬಾರದು ಎಂಬುದಾಗಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಎರಡರಲ್ಲೂ ಮುದ್ರಿಸಲಾದ ಮಾಹಿತಿಯನ್ನು ಸಹ ಒಳಗೊಂಡಿರುತ್ತದೆ. ತರಬೇತಿ ಪಡೆದ ಸ್ವಯಂಸೇವಕರ ಪ್ರತ್ಯೇಕ ತಂಡವು ರೋಗಿಯ ಮನೆ ಬಾಗಿಲಿನ ವೈದ್ಯಕೀಯ ಕಿಟ್ ಅನ್ನು ತಲುಪಿಸಲಿರುವರು.
- ಕೋವಿಡ್ ಕೇರ್ ಸೆಂಟರ್‌ಗಳಿಗೆ ಉಲ್ಲೇಖಿಸಲ್ಪಟ್ಟ ರೋಗಿಗಳನ್ನು ಸಂಬಂಧಪಟ್ಟ ಸ್ವಯಂಸೇವಕರ ತಂಡಗಳು ಪ್ರತಿ ನಿತ್ಯ ಅನುಸರಣೆ/ಸಮಾಲೋಚನೆಯಲ್ಲಿ ತೊಡಗಲಿರುವರು.
- ಈ ಉಪಕ್ರಮದಿಂದ ರೋಗಿಗಳು ವೈದ್ಯರೊಂದಿಗೆ ಸಂವಹನ ನಡೆಸುವಾಗ ಮತ್ತು ಸೋಂಕಿನ ತೀವ್ರತೆಯ ಆಧಾರದ ಮೇಲೆ ಸಲಹೆಯನ್ನು ಪಡೆಯುವುದರಿಂದ ಮಾನಸಿಕ ಖಿನ್ನತೆಗೆ ಒಳಗಾಗಿರುವವರು ಆತ್ಮವಿಶ್ವಾಸವನ್ನು ಪಡೆಯುತ್ತಾರೆ. ಪ್ಯಾನಿಕ್‌ನಿಂದ ಬಳಲುತ್ತಿರುವ ರೋಗಿಗಳಿಂದಾಗಿ ಪ್ರಸ್ತುತ ಆಸ್ಪತ್ರೆಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತಿದೆ.
- ಮನೆ ಪ್ರತ್ಯೇಕತೆಗೆ ಶಿಫಾರಸ್ಸು ಮಾಡಿದ ರೋಗಿಗಳನ್ನು ಸ್ವಯಂಸೇವಕರು ಪ್ರತಿದಿನವೂ ಅನುಸರಣೆ/ಸಮಾಲೋಚಿಸುತ್ತಾರೆ ಮತ್ತು ರೋಗಿಯ ಆರೋಗ್ಯದ ಸ್ಥಿತಿಯನ್ನು ದಾಖಲಿಸಲಾಗುವುದು. ತುರ್ತು ಸಂದರ್ಭದಲ್ಲಿ ಈ ಉದ್ದೇಶಕ್ಕಾಗಿ ಸ್ಥಾಪಿಸಲಾಗಿರುವ ವಾರ್-ರೂಂ ಮುಖೇನಾ ರೋಗಿಗಳನ್ನು ಹತ್ತಿರದ ಕೋವಿಡ್ ಕೇರ್ ಸೆಂಟರ್ ಅಥವಾ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗುವುದು.
- ಸಾಂತ್ವನ ಕೇಂದ್ರ :- ಕೋವಿಡ್ ಸೈಕೋ ಸೋಷಿಯಲ್ ಸಪೋರ್ಟ್ (ಮನೋ ಸಾಮಾಜಿಕ ಆಪ್ತ ಸಮಾಲೋಚನೆ) ಕೋವಿಡ್‌ನಿಂದ ನೇರವಾಗಿ ಅಥವಾ ಪರೋಕ್ಷವಾಗಿ ಮಾನಸಿಕ ಅಥವಾ ಸಾಮಾಜಿಕ ಒತ್ತಡಕ್ಕೆ ಒಳಗಾದಂತವರಿಗೆ ಕೌನ್ಸಲಿಂಗ್ ನಡೆಸಲು ಮೈಸೂರು ಮಹಾನಗರ ಪಾಲಿಕೆ, ರೋಟರಿ ಸಂಸ್ಥೆ ಮತ್ತು ಸಿಟಿಜನ್ಸ್ ಫೋರಂ ಮೈಸೂರು ರವರ ವತಿಯಿಂದ ಸಾಂತ್ವನ ಕೇಂದ್ರವನ್ನು ಪ್ರಾರಂಭಿಸಲಾಗಿದೆ.(ದೂ.ಸಂ : 0821-2330803/2331803)
- ಕೋವಿಡ್-19 ಮೂರನೇ ಅಲೆಯ ಮುಂಜಾಗ್ರತಾ ಕ್ರಮವಾಗಿ 10 ಮಂದಿ ಮಕ್ಕಳ ತಜ್ಞ ವೈದ್ಯರುಗಳು, ಗರ್ಭಿಣಿ ಸ್ತ್ರೀ ಮತ್ತು ತಾಯಿ ಮಗು ಆರೈಕೆಗಾಗಿ 04 ಮಂದಿ ತಜ್ಞ ವೈದ್ಯರುಗಳು ಮತ್ತು Mucormycosis ( Black Fungus) ರೋಗಿಗಳ ಆರೈಕೆಗಾಗಿ 04 ಮಂದಿ ತಜ್ಞ ವೈದ್ಯರುಗಳು ನಿಯೋಜಿಸಲು ಕ್ರಮ ವಹಿಸಲಾಗಿದೆ.

..15

- ಈ ಕೋವಿಡ್ ಟೆಲಿ ಕೇರ್ ಕೇಂದ್ರವು ಪ್ರತಿ ದಿನ ಬೆಳಿಗ್ಗೆ 8 ರಿಂದ ರಾತ್ರಿ 11 ರವರೆಗೆ ಕಾರ್ಯನಿರ್ವಹಿಸುತ್ತಿದ್ದು, ಸಂಪರ್ಕಕ್ಕಾಗಿ ಸ್ಥಿರ ದೂರವಾಣಿ ಸಂಖ್ಯೆ : 0821–2420112 ಮತ್ತು 0821–2420113 ಅನ್ನು ಒದಗಿಸಲಾಗಿದೆ.
- **TELE CONSULATATION ಗೆ** ನೋಡಲ್ ಅಧಿಕಾರಿಯನ್ನಾಗಿ ಶ್ರೀಮತಿ.ಹರ್ಷಿಯಾ ತರನುಂ, ಅಭಿವೃದ್ಧಿ ಅಧಿಕಾರಿ, ವಲಯ ಕಚೇರಿ–09 ಇವರನ್ನು ನಿಯೋಜಿಸಿ ಆದೇಶಿಸಿದೆ.

**ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಈಗಾಗಲೇ ಪ್ರಾರಂಭಿಸಿರುವ ಮನೆ–ಮನೆ ಸಮೀಕ್ಷೆ ಕಾರ್ಯವನ್ನು ಯಶಸ್ವಿಯಾಗಿಸುವ ಉದ್ದೇಶದಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ.**

ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿಯನ್ನು ಒಳಗೊಂಡಂತೆ ಆಶಾ ಕಾರ್ಯಕರ್ತೆಯರು, ಸ್ವಯಂ ಸೇವಕರುಗಳು, ಕೋವಿಡ್ ನಿರ್ವಹಣೆಯಲ್ಲಿ ಮುಂಚೂಣಿಯಲ್ಲಿರುವವರು ಮನೆ–ಮನೆಗೆ ತೆರಳಿ ಸಮೀಕ್ಷೆ ನಡೆಸಲು ಪ್ರತಿ ವಾರ್ಡ್ ಮಟ್ಟದಲ್ಲಿ 10 ತಂಡಗಳನ್ನು ರಚಿಸಲಾಗಿದ್ದು, ಸದರಿ ತಂಡಗಳಿಗೆ ಗುಣಾತ್ಮಕ ತರಬೇತಿಯನ್ನು ಸಹ ನೀಡಲಾಗಿರುತ್ತದೆ. ಸದರಿ ತಂಡಗಳಿಗೆ ಪಲ್ಸ್ ಆಕ್ಸಿಮೀಟರ್ ಮತ್ತು ಥಾರ್ಮಲ್ ಸ್ಕ್ಯಾನರ್‌ಗಳನ್ನು ಪಾಲಿಕೆಯಿಂದ ಒದಗಿಸಲಾಗಿದ್ದು, ಅವುಗಳನ್ನು ಬಳಸಿಕೊಂಡು ಮನೆಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಿ ರೋಗ ಲಕ್ಷಣಗಳು ಕಂಡುಬಂದ 986 ವ್ಯಕ್ತಿಗಳಿಗೆ RT-PCR ಮತ್ತು RAT ಪರೀಕ್ಷೆಗೆ ಒಳಪಡಿಸಲಾಗಿದೆ .ಹಾಗೂ RT-PCR ಮತ್ತು RAT ಪರೀಕ್ಷೆಯಲ್ಲಿ ಪಾಸಿಟಿವ್ ಕಂಡು ಬಂದ ವ್ಯಕ್ತಿಗಳನ್ನು ಕೋವಿಡ್ ಮಿತ್ರ. ಕೋವಿಡ್ ಕೇರ್ ಸೆಂಟರ್ ಮತ್ತು ಕೋವಿಡ್ ಆಸ್ಪತ್ರೆಗಳಿಗೆ ದಾಖಲಿಸಲು ಕ್ರಮವಹಿಸಲಾಗಿದೆ ಹಾಗೂ 141377 ವ್ಯಕ್ತಿಗಳಿಗೆ ಕೋವಿಡ್ ಲಸಿಕೆ ಹಾಕಿಸಲಾಗಿದೆ. ಪಾಲಿಕೆಯ 65 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಒಟ್ಟು 2,76,322 ಮನೆಗಳಿದ್ದು, ಈ ಪೈಕಿ 202924 ಮನೆಗಳಿಗೆ ಭೇಟಿ ನೀಡಿ ಸಮಿಕ್ಷೇ ಪೂರ್ಣಗೊಳಿಸಲಾಗಿದ್ದು, ಶೇ.96.80 ಗುರಿ ಸಾಧಿಸಿದ್ದು, ಉಳಿದ ಮನೆಗಳ ಸಮಿಕ್ಷೇ ಪ್ರಗತಿಯಲ್ಲಿರುತ್ತದೆ.**( ದಿನಾಂಕ : 02–06–2021 ರ ಅಂತ್ಯಕ್ಕೆ ವಿವರ ಈ ಕೆಳಕಂಡಂತಿದೆ.).**

| Total Houses Surveyed | Total Population Surveyed | | | | No. of persons Vaccinated | No of persons with symptoms | No of Houses Locked |
|---|---|---|---|---|---|---|---|
| | Below 18 Years | 18-45 Year | 45 yr+ | Total | | | |
| 202924 | 179408 | 312753 | 207907 | 729778 | 141377 | 986 | 7037 |

ಮನೆ–ಮನೆ ಸಮೀಕ್ಷೆಯ (Door to Door Survey) ಜವಾಬ್ದಾರಿಯನ್ನು ನೋಡಿಕೊಳ್ಳುವುದಕ್ಕಾಗಿ ಶ್ರೀ.ಕೆ.ಸಿ.ರಮೇಶ್, ನಗರ ಯೋಜನಾ ಜಂಟಿ ನಿರ್ದೇಶಕರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

**ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, Mucormycosis( Black Fungus) ರೋಗವನ್ನು ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ ಅವುರುಗಳನ್ನು ತಪಾಸಣೆಗೆ ಒಳಪಡಿಸಿ ನಿಗಾ ವಹಿಸುವ ಸಂಬಂಧ ಕೈಗೊಂಡಿರುವ ಕ್ರಮಗಳ ಬಗ್ಗೆ.**

ಕೋವಿಡ್–19 ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾಲಿಕೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಲಸಿಕೆ ಹಾಕಿಸುವ ಕಾರ್ಯಕ್ಕಾಗಿ ಮೂರು ಕೇಂದ್ರಗಳನ್ನು ತೆರೆಯಲಾಗಿದ್ದು, ಸದರಿ ಕೇಂದ್ರಗಳಲ್ಲಿ ಬೀದಿ ಬದಿ ವ್ಯಾಪಾರಿಗಳು, ವಾರ್ ರೂಂನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಹಾಗೂ ವಾರ್ಡ್ ಮಟ್ಟದ ಕಾರ್ಯಪಡೆಯಲ್ಲಿ ಕಾರ್ಯನಿರತರಾಗಿರುವವರಿಗೆ ಲಸಿಕೆ ಹಾಕಿಸಲು ಕ್ರಮ ವಹಿಸಲಾಗಿದೆ. ಅದರಂತೆ ಈವರೆವಿಗೆ ಅಗತ್ಯ ಸೇವೆಯಡಿ ಕಾರ್ಯನಿರ್ವಹಿಸುತ್ತಿರುವ ವಾಣಿ ವಿಲಾಸ ನೀರು ಸರಬರಾಜು ಕೇಂದ್ರದ 658 ಸಿಬ್ಬಂದಿಗಳಿಗೆ ಮತ್ತು 736 ಬೀದಿ ಬದಿ ವ್ಯಾಪರಿಗಳಿಗೆ ಲಸಿಕೆ ನೀಡಲಾಗಿದೆ.

Mucormycosis (Black Fungus) ಸಂಬಂಧಿಸಿದಂತೆ ಜವಾಬ್ದಾರಿಯನ್ನು ನೋಡಿಕೊಳ್ಳುವುದಕ್ಕಾಗಿ ಡಾ.ಡಿ.ಜಿ.ನಾಗರಾಜ್, ಪಾಲಿಕೆ ಆಯೋಗ್ಯಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ. Diabeties ರೋಗಿಗಳಿಗೆ Albendazole ಮಾತ್ರೆಯನ್ನು ವಿತರಣೆ ಮಾಡಲಾಗಿದೆ

**ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಸೋಂಕಿತ ವ್ಯಕ್ತಿಗಳ ವರದಿ ಸ್ವೀಕೃತವಾದ ಕೂಡಲೇ ಮೈಸೂರು ನಗರದಲ್ಲಿ ವಾರ್ ರೂಂ ಮೂಲಕ Triage ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ.**

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಸೋಂಕಿತ ವ್ಯಕ್ತಿಗಳ ವರದಿ ಸ್ವೀಕೃತವಾದ ಕೂಡಲೇ ಮೈಸೂರು ನಗರದಲ್ಲಿ ವಾರ್ ರೂಂ ಮೂಲಕ Triage ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಜವಾಬ್ದಾರಿಯನ್ನು ನೋಡಿಕೊಳ್ಳುವುದಕ್ಕಾಗಿ ಶ್ರೀ.ಆರ್.ರಂಗಸ್ವಾಮಿ, ಕೆ.ಎ.ಎಸ್., ಕೌನ್ಸಿಲ್ ಕಾರ್ಯದರ್ಶಿಗಳು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ದಿನಾಂಕ : 27–05–2021 ರಂದು ಆದೇಶ ಹೊರಡಿಸಲಾಗಿತ್ತು, ಆದರೆ ಸದರಿ ಅಧಿಕಾರಿಯವರು ಮಹಾಪೌರರ ಚುನಾವಣೆ ಪ್ರಕ್ರಿಯೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರಣ, ಇವರ ಬದಲಾಗಿ ಡಾ: ನಾಗರಾಜ, ಕೆ.ಜಿ.ಎಸ್.,(ಹಿರಿಯ ಶ್ರೇಣಿ) ಉಪ ಆಯುಕ್ತರು(ಕಂದಾಯ), ಮೈಸೂರು ಮಹಾನಗರ ಪಾಲಿಕೆ ಮೈಸೂರು ಇವರನ್ನು ನೇಮಕ ಮಾಡಿ ದಿನಾಂಕ : 02–06–2021 ರಂದು ಆದೇಶ ಹೊರಡಿಸಲಾಗಿದೆ.

**ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, Reverse Isolation ಕಾರ್ಯಗಳನ್ನು ನಿರ್ವಹಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ.**

ಮೈಸೂರು ನಗರದಲ್ಲಿ ಕೋವಿಡ್–19 ಸೋಂಕಿತ ವ್ಯಕ್ತಿಯು ಮನೆಯ ಪ್ರತ್ಯೇಕತೆಯಲ್ಲಿರುವ (HOME ISOLATION) ಮನೆಗಳಲ್ಲಿನ ಕುಟುಂಬದ ಇತರೇ ಸದಸ್ಯರುಗಳನ್ನು ತಪಾಸಣೆಗೆ ಒಳಪಡಿಸಿ Reverse Isolation ಗೆ ದಿನಾಂಕ : 30–05–2021 ರಿಂದ ಕ್ರಮವಹಿಸಲಾಗುತ್ತಿದ್ದು, ಈ ಕಾರ್ಯಕ್ಕಾಗಿ ಜಿ.ಎಸ್.ಎಸ್. ಸಂಸ್ಥೆ, ಆರೋಗ್ಯ ಭಾರತಿ, ರೋಟರಿ, ತೇರಾಪಂಥ್ ಯುವಕ ಮಂಡಳಿ, ಪ್ರಮತಿ ಹಿಲ್ ವ್ಯೂ ಶಾಲೆ ವತಿಯಿಂದ PRAMATHI HILL VIEW ಶಾಲೆಯಲ್ಲಿ ವಸತಿ ಮತ್ತು ಔಷದೋಪಚಾರವನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಅಂತಹ ವ್ಯಕ್ತಿಗಳ ನಿಗಾ ವಹಿಸಲು ಸಹ ಕ್ರಮವಹಿಸಲಾಗುತ್ತಿದೆ.

**ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ವಸತಿ ಸಮುಚ್ಚಾಯಗಳಲ್ಲಿ (ಅಪಾರ್ಟ್‌ಮೆಂಟ್) ಕೋವಿಡ್ ಪ್ರಥಮ ಚಿಕಿತ್ಸಾ ಆರೈಕೆ ಪ್ರದೇಶ ಪ್ರಾರಂಭಿಸಿರುವ ಬಗ್ಗೆ**

ಕೋವಿಡ್ ಸೋಂಕಿತರಲ್ಲಿ ಸುಮಾರು 80% ರಷ್ಟು ಜನರು ಆಸ್ಪತ್ರೆಗೆ ದಾಖಲಾಗುವ ಅವಶ್ಯಕತೆ ಇಲ್ಲದಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಆತಂಕ ಮಿತಿಮೀರಿದ ಜನರಿಂದಾಗಿ ಪ್ರಸ್ತುತ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ವ್ಯವಸ್ಥೆಯಲ್ಲಿ ಹೆಚ್ಚಿನ ಒತ್ತಡ ಉಂಟಾಗುತ್ತಿದೆ. ಆರೋಗ್ಯ ವ್ಯವಸ್ಥೆ ನೋಡಿಕೊಳ್ಳುವವರು ಮತ್ತು ಇತರೇ ವ್ಯವಸ್ಥೆಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಹಾಗೂ ನಾಗರೀಕರಿಗೆ ಸಾಧ್ಯವಾದಷ್ಟು ಉತ್ತಮವಾದ ಸಹಕಾರ ಲಭ್ಯವಾಗುವಂತೆ, ಹಾಲಿ ಇರುವಂತಹ ಆರೋಗ್ಯ ವ್ಯವಸ್ಥೆಗೆ ಪೂರಕವಾಗಿ ಹೊಸ ವಿಧಾನಗಳನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತವು ಸರ್ವ ಪ್ರಯತ್ನಗಳನ್ನು ಮಾಡುತ್ತಿದೆ.

ಈ ಗುರಿಯನ್ನು ಸಾಧಿಸಲು ನಗರದ ಎಲ್ಲಾ ನಾಗರಿಕರ ಸಹಕಾರ ಅವಶ್ಯಕವಾಗಿದ್ದು, ಅದರಲ್ಲೂ ವಿಶೇಷವಾಗಿ ವಸತಿ ಸಮುಚ್ಚಾಯಗಳಲ್ಲಿ (ಅಪಾರ್ಟ್‌ಮೆಂಟ್) ವಾಸಿಸುವ ನಿವಾಸಿಗಳ ಸಹಕಾರವು ಸಹ ಅತ್ಯಾವಶ್ಯಕವಾಗಿದೆ. ಮನೆಯಲ್ಲೇ ಚಿಕಿತ್ಸೆ ಮತ್ತು ಆರೈಕೆ ಪಡೆಯಬಹುದಾದ ನಾಗರೀಕರಿಗೆ ಪ್ರಾರಂಭಿಕ ಹಂತದಲ್ಲಿ ಸ್ಕ್ರೀನಿಂಗ್‌ಗೆ ಸಹಾಯ ಮಾಡಲು ಸಂಪರ್ಕ ಕೇಂದ್ರವಾಗಿ ಕಾರ್ಯನಿರ್ವಹಿಸಲು ಸ್ವಯಂಸೇವಕರ ಸೇವೆ ಅಗತ್ಯವಿರುತ್ತದೆ

ಆದ್ದರಿಂದ, ನಿವಾಸಿ ಕ್ಷೇಮಾಭಿವೃದ್ಧಿ ಸಂಘವನ್ನು (ರೆಸಿಡೆಂಟ್ ವೆಲ್ಫೇರ್ ಅಸೋಸಿಯೇಷನ್) ಪ್ರತಿನಿಧಿಸುವ ಇಬ್ಬರು ಅಥವಾ ಮೂವರು ಪ್ರತಿನಿಧಿಗಳು ಅಥವಾ ಪ್ರಸ್ತುತ ಇದೇ ರೀತಿ ಇತರೇ ಕ್ಷೇಮಾಭಿವೃದ್ಧಿ ಸಂಸ್ಥೆಯು ನಿರ್ವಹಿಸುತ್ತಿದ್ದಲ್ಲಿ ಅವರುಗಳು ಸಹ ಈ ಹೊಸ ವಿಧಾನದಲ್ಲಿ ಭಾಗವಹಿಸಲು ಕೋರಲಾಗಿದೆ. ಮೈಸೂರು ಜಿಲ್ಲೆಯಲ್ಲಿನ ಎಲ್ಲಾ ವಸತಿ ಸಮುಚ್ಚಾಯಗಳಲ್ಲಿ (ಅಪಾರ್ಟ್‌ಮೆಂಟ್) ವಾಸಿಸುವ ನಿವಾಸಿಗಳು ವಸತಿ ಸಮುಚ್ಚಾಯದೊಳಗೆ ಈ ಕೆಳಕಂಡ ಸೌಲಭ್ಯಗಳನ್ನು ಪಡೆಯುವಂತಿರಬೇಕು.  ವಸತಿ ಸಮುಚ್ಚಾಯದಲ್ಲಿ ಮಕ್ಕಳ ಆಟಿಕೆಗಾಗಿ ಕಾಯ್ದಿರಿಸಿರುವ ಸ್ಥಳ

ಮತ್ತು ವಸತಿ ಪ್ರದೇಶಗಳಿಂದ ದೂರದಲ್ಲಿರುವ ತೆರೆದ ಸ್ಥಳದಲ್ಲಿ ಕೋವಿಡ್ ಪ್ರಥಮ ಚಿಕಿತ್ಸಾ ಕೇಂದ್ರವನ್ನು ತೆರೆಯಲು ಸ್ಥಳವನ್ನು ನಿಗಧಿಪಡಿಸಲು ಸೂಚಿಸಲಾಗಿದೆ. ಈ ಕೆಳಗೆ ವಿವರಿಸಿರುವ ಹೆಲ್ತ್‌ಕೇರ್ ವ್ಯವಸ್ಥೆಗಳನ್ನು ಕೋವಿಡ್ ಪ್ರಥಮ ಚಿಕಿತ್ಸಾ ಕೇಂದ್ರದಲ್ಲಿ ಕಡ್ಡಾಯವಾಗಿ ಒದಗಿಸಲು ಸಹ ಸೂಚಿಸಲಾಗಿದೆ.

<u>ಒದಗಿಸಬೇಕಾದ ತುರ್ತು ಸೌಲಭ್ಯಗಳು :–</u>

1. ಪಲ್ಸ್ ಆಕ್ಸಿಮೀಟರ್ – ಪ್ರತಿ 200 ನಿವಾಸಿಗಳಿಗೆ ಒಂದು
2. ಎರಡು ಆಮ್ಲಜನಕ ಸಾಂದ್ರಕಗಳು
3. ಡಿಜಿಟಲ್ ರಕ್ತದೊತ್ತಡ ಮಾಪನ ಉಪಕರಣಗಳು
4. ರಕ್ತದಲ್ಲಿನ ಸಕ್ಕರೆ ಮೇಲ್ವಿಚಾರಣಾ ವ್ಯವಸ್ಥೆ
5. ತುರ್ತು ಸಂದರ್ಭದಲ್ಲಿ ಬಳಸಲು 4 ಪಿಪಿಇ ಕಿಟ್‌ಗಳು

ಮೈಸೂರು ನಗರದ ವಾರ್ಡ್ ನಂ 62 ರ ವ್ಯಾಪ್ತಿಯಲ್ಲಿ ಬರುವ ಸುದರ್ಶನ ವಸತಿ ಸಮುಚ್ಚಾಯ (ಅಪಾರ್ಟ್‌ಮೆಂಟ್) ದಲ್ಲಿ ಕೋವಿಡ್–19 ಪ್ರಥಮ ಚಿಕಿತ್ಸಾ ಕೇಂದ್ರವನ್ನು ಈಗಾಗಲೇ ಪ್ರಾರಂಭಿಸಿ, ಚಿಕಿತ್ಸೆಯನ್ನು ನೀಡುವುದರೊಂದಿಗೆ  ಮಾದರಿಯಾಗಿರುತ್ತಾರೆ. ಬಿಲ್ಡರ್ಸ್ ಅಸೋಸಿಯೇಷನ್ ಮತ್ತು ಜಿ.ಎಸ್.ಎಸ್., ಡೆವಲಪರ್ಸ್ ರವರುಗಳು ಸಹ ಪಾಲಿಕೆಯ ಕಾರ್ಯಕ್ರಮದಲ್ಲಿ ಕೈಜೋಡಿಸಿ ಸಹಕಾರಿಯಾಗಿರುತ್ತಾರೆ. ಅದೇ ರೀತಿ ನಗರ ವ್ಯಾಪ್ತಿಯಲ್ಲಿ ಇರುವ ಎಲ್ಲಾ ವಸತಿ ಸಮುಚ್ಚಾಯ (ಅಪಾರ್ಟ್‌ಮೆಂಟ್) ಗಳಲ್ಲಿಯೂ ಕೋವಿಡ್–19 ಪ್ರಥಮ ಚಿಕಿತ್ಸಾ ಕೇಂದ್ರವನ್ನು ಕಾರ್ಯಾರಂಭ ಮಾಡಲು ಕ್ರಮವಹಿಸಲು ಸೂಚಿಸಲಾಗಿದ್ದು, ಅದರಂತೆ ಕ್ರಮವಹಿಸಿರುತ್ತಾರೆ.

## <u>ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಕೂಲಿ ಕಾರ್ಮಿಕರು, ವಲಸಿಗರು ಮತ್ತು ಇನ್ನಿತರೇ ದುರ್ಬಲ ವರ್ಗದವರಿಗಾಗಿ ಆಶ್ರಯ ಕೇಂದ್ರಗಳನ್ನು ಪ್ರಾರಂಭಿಸಿರುವ ಬಗ್ಗೆ</u>

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೂಲಿ ಕಾರ್ಮಿಕರು, ವಲಸಿಗರು ಮತ್ತು ಇನ್ನಿತರೇ ದುರ್ಬಲ ವರ್ಗದವರಿಗಾಗಿ ಮೈಸೂರು ನಗರ ಪಾಲಿಕೆ ವತಿಯಿಂದ ನಗರದ ನಂಜರಾಜ ಬಹದ್ದೂರ್ ಛತ್ರ ಮತ್ತು ಸಿದ್ದಾರ್ಥ ನಗರದ ಸಿ.ಐ.ಟಿ.ಬಿ, ಛತ್ರದಲ್ಲಿ  ಆಶ್ರಯ ಕೇಂದ್ರಗಳನ್ನು ಪ್ರಾರಂಭಿಸಿಸಲಾಗಿರುತ್ತದೆ. ನಂಜರಾಜ ಬಹದ್ದೂರ್ ಛತ್ರದಲ್ಲಿ 150 ಜನರು ಮತ್ತು ಸಿದ್ದಾರ್ಥ ನಗರದ ಸಿ.ಐ.ಟಿ.ಬಿ, ಛತ್ರದಲ್ಲಿ 250 ಜನರಿಗೆ ಆಶ್ರಯ ನೀಡಲು ವ್ಯವಸ್ಥೆ ಕಲ್ಪಿಸಲಾಗಿದೆ. ಸದರಿ ಎರಡು ಆಶ್ರಯ ಕೇಂದ್ರಗಳಲ್ಲಿ 118 ಪುರುಷರು ಆಶ್ರಯ ಪಡೆಯುತ್ತಿದ್ದಾರೆ. ಸದರಿಯವರುಗಳಿಗೆ ಕೋವಿಡ್–19 ಗೆ ಸಂಬಂಧಿಸಿದಂತೆ ತಪಾಸಣೆಯನ್ನು ಕೈಗೊಳ್ಳಲಾಗಿದೆ. ಆಶ್ರಯ ಪಡೆಯುತ್ತಿರುವವರಿಗೆ ಉಚಿತವಾಗಿ ಬೆಳಗಿನ ಉಪಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟಗಳನ್ನು ಇಂದಿರಾ ಕ್ಯಾಂಟಿನ್‌ಗಳಿಂದ ಒದಗಿಸಲು ಕ್ರಮವಹಿಸಲಾಗಿದೆ.

ಅಲ್ಲದೇ, ರೋಟರಿ ಸಂಸ್ಥೆ ಮತ್ತು ಸರ್ಕಾರೇತರ ಸಂಸ್ಥೆಗಳು ಸಹ ಕೂಲಿ ಕಾರ್ಮಿಕರು, ವಲಸಿಗರು ಮತ್ತು ಇನ್ನಿತರೇ ದುರ್ಬಲ ವರ್ಗದವರಿಗಾಗಿ ಹಾಗೂ ಪಾಲಿಕೆಯ ಪೌರಾಕಾರ್ಮಿಕರುಗಳಿಗೆ ಉಚಿತವಾಗಿ ಬೆಳಗಿನ ಉಪಹಾರ ಒದಗಿಸುತ್ತಿದ್ದಾರೆ.

..18

**<u>ಕೋವಿಡ್–19 ಮೂರನೇ ಅಲೆ ತಡೆಗಟ್ಟಲು ಕೈಗೊಂಡಿರುವ ಮುಂಜಾಗ್ರತ ಕ್ರಮಗಳು</u>**

ಮೈಸೂರಿನ ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಸ್ಕ್ಯಾನ್‌ರೇ ಸಂಸ್ಥೆಯವರ ಸಹಯೋಗದೊಂದಿಗೆ ಕೋವಿಡ್–19 ಮೂರನೇ ಅಲೆ ತಡೆಗಟ್ಟುವ ಸಂಬಂಧವಾಗಿ 25 ವೈದ್ಯರುಗಳನ್ನು ಒಳಗೊಂಡಂತೆ 06 ಉಪ ತಂಡಗಳನ್ನು ರಚಿಸಲಾಗಿದ್ದು, ಈ ಸಂಬಂಧ ಈಗಾಗಲೇ ಪೂರ್ವಾಭಾವಿ ಕ್ರಮಗಳನ್ನು ಪ್ರಾರಂಭಿಸಲಾಗಿರುತ್ತದೆ.

**<u>ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕೋವಿಡ್–19 ಸಂಬಂಧವಾಗಿ ವೆಚ್ಚ ಮಾಡಿರುವ ವಿವರ</u>**

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕೋವಿಡ್–19 ಸಂಬಂಧವಾಗಿ 2021–22 ನೇ ಸಾಲಿನಲ್ಲಿ ಈವರೆವಿಗೆ ರೂ.1,87,73,501/– ( ಒಂದು ಕೋಟಿ ಎಂಬತ್ತೇಳು ಲಕ್ಷ ಎಪ್ಪತ್ತ ಮೂರು ಸಾವಿರದ ಐದು ನೂರ ಒಂದು ರೂಪಾಯಿಗಳು ಮಾತ್ರ) ವೆಚ್ಚ ಮಾಡಲಾಗಿದೆ.

ಸಹಿ/–
ಆಯುಕ್ತರು
ಮೈಸೂರು ಮಹಾನಗರ ಪಾಲಿಕೆ
ಮೈಸೂರು

ರವರಿಗೆ,

ಸಂಪಾದಕರು/ವರದಿಗಾರರು

....................................................  ಪತ್ರಿಕೆ